ಪಂಚಮ

ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಪಂಚಮಕ್ಕೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ 5 ರೂ.ಗಳು

ಸಂಪುಟ : 3 ಸಂಚಿಕೆ : 7 5, ಏಪ್ರಿಲ್ 1979 ಪಾಕ್ಷಿಕ ಬೆಲೆ : 20ಪೈಸೆ

ಬುಲ್ಡೋಜರ್‌ನಿಂದ ದಲಿತರ ಗುಡಿಸಲುಗಳ ನೆಲಸಮ

ವರದಿ: ಜನಾರ್ಧನ

ಸರ್ಕಾರ ಒಂದು ಕಡೆ ದಲಿತರಿಗೆ ಸುಭದ್ರ ನೆಲೆ ಒದಗಿಸುತ್ತಿರುವ ಘೋಷಣೆ ಕೂಗುತ್ತಾ ಜೊತೆಗೆ ಮತ್ತೊಂದು ಕಡೆ ಒಂದೇ ದಬ್ಬಾಳಿಕೆ ನಡೆಸಿ ನೆಲೆನಿಂತ ದಲಿತರನ್ನು ಬೀದಿ ಪಾಲು ಮಾಡುತ್ತಿರುವುದು ವಿಪರ್ಯಾಸದ ಸಂಗತಿ.

ಬೆಂಗಳೂರಿನ ಬನಶಂಕರಿ ಬಡಾವಣೆಯಲ್ಲಿಯ ದೇವಸ್ಥಾನದ ಹಿಂಭಾಗದಲ್ಲಿರುವ ಸುಮಾರು 10 ಎಕರೆ ಖಾಲಿಪ್ರದೇಶದಲ್ಲಿ ಕಳೆದ ಹತ್ತು ಹದಿನೈದು ವರ್ಷಗಳಿಂದಲೂ ಇಪ್ಪತ್ತು ದಲಿತ ಕುಟುಂಬಗಳು ಗುಡಿಸಲು ಕಟ್ಟಿಕೊಂಡು ವಾಸವಾಗಿದ್ದರು. ಜೊತೆಗೆ ಕಳೆದ ವರ್ಷ ಕಾಂಗ್ರೆಸ್‌ನ ಹರಿಜನ ಎಂ. ಎಲ್. ಸಿ. ಯೊಬ್ಬರ ಆಶ್ವಾಸನೆ ನಂಬಿಕೆಯಿಂದ ಬೆಳಗಾಗುವಷ್ಟರಲ್ಲಿ ಆರುನೂರು ಗುಡಿಸಲುಗಳು ಹುಟ್ಟಿಕೊಂಡವು. ಸೈಟಿಗೆ (ಚದರ 20 × 25). ಅದರ ಅಳತೆ, ನಂಬರಿಗಾಗಿ, ಹಣ ತೆತ್ತ ದಲಿತರು ಹೊಟ್ಟೆಗಿಲ್ಲದಿದ್ದರೂ ಒಂದಿಷ್ಟು ಸ್ಥಳ ಸಿಕ್ಕಿದಂತಾಗಿ ಸಮಾಧಾನದ ಉಸಿರುಬಿಟ್ಟರು. ಇವೆಲ್ಲಾ ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ಸ್ಥಳ ಪರಿಶೀಲನೆ ನಂತರವೇ ನಡೆದಿದೆ.

ಈ ನಡುವೆ ಕಳೆದ ಮಾರ್ಚಿ 17 ರಂದು ಯಾವ ಮುನ್ಸೂಚನೆಯನ್ನೂ ಕೊಡದೆ ಸ್ಪೆಷಲ್ ಡೆಪ್ಯುಟಿ ಕಮೀಷನರ್ (ಲ್ಯಾಂಡ್ ಅಕ್ವಿಜಿಷನ್). ಮತ್ತು ಸಂಬಂಧಪಟ್ಟ ಅಧಿಕಾರಿಗಳು ಧಾವಿಸಿ ಎಲ್ಲಾ ಗುಡಿಸಲುಗಳನ್ನೂ ಈ ಕೂಡಲೇ ಖಾಲಿ ಮಾಡಿ. ಈ ಪ್ರದೇಶ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ ಸಂಸ್ಥೆಗೆ ಸೇರಿದೆ ಎಂದು ಅಲ್ಲಿನ ನಿವಾಸಿಗಳಿಗೆ ಹೇಳುತ್ತಿರುವಾಗಲೇ ಅವರೊಟ್ಟಿಗೇ ಗುಡಿಸಲುಗಳನ್ನು ಉರುಳಿಸಲೆಂದೇ ಬಂದಿದ್ದ ಜನ ಪುಂಗರು ಮಕ್ಕಳನ್ನು ಅಮಾನುಷವಾಗಿ ಹೊರಗೆಳೆದು ಗುಡಿಸಲುಗಳನ್ನು ನೆಲಕ್ಕೆ ಉರುಳಿಸುತ್ತಾ ಬಂದರು. ಗುಡಿಸಲುಗಳನ್ನು ಈಗ ಬುಲ್ಡೋಜರ್‌ನಿಂದ ಸಂಪೂರ್ಣ ನೆಲಸಮ ಮಾಡಲಾಗಿದೆ.

ಸೈಟನ್ನು ನಿಮ್ಮ ಹೆಸರಿಗೆ ಮಾಡಿರುವುದಾಗಿ ಹರಿಜನ ಎಂ. ಎಲ್. ಸಿ. ಯೊಬ್ಬ ಪ್ರತಿ ಕುಟುಂಬವಾಸಿಗಳಿಂದ ತಲಾ 50 ರೂ.ಗಳನ್ನು ಪಡೆದಿದ್ದಾರೆಂದು ಅಲ್ಲಿನ ನಿವಾಸಿಗಳು ತಾವು ಮೋಸಹೋದುದರ ಬಗ್ಗೆ ಗೋಳಿಟ್ಟು ಹೇಳಿದರು. ತಮ್ಮ ಏಜೆಂಟರುಗಳ ಸಹಸ್ರಾರು ರೂ. ಸಂಗ್ರಹಿಸಿರುವ ಎಂ. ಎಲ್. ಸಿ. ಯೂ ಹಣವಸೂಲಿಯು ತಮಗೆ ಗೊತ್ತಿಲ್ಲವೆಂದು ಸನ್ನಿಕೈಯಲ್ಲೇ ಹಣ ನೀಡಿದ್ದರೆ ನಿಮ್ಮನ್ನು ರಕ್ಷಿಸುತ್ತಿದೆ ಎಂದು ಮುಗ್ಧ ನಿರ್ವಸತಿಗರಿಗೆ ಹೇಳಲು ತೊಡಗಿದ್ದಾರೆ.



ಸರ್ಕಾರಿ ಅಧಿಕಾರಿಗಳ ಕ್ರೂರಕೃತ್ಯಕ್ಕೆ ಬಲಿಯಾಗಿ ಉರುಳಿದಿದ್ದ ಇಂತಹ ಕೆಲವಾರು ಗುಡಿಸಲುಗಳನ್ನು ಈಗ ಬುಲ್ಡೋಜರ್‌ನಿಂದ ಸಂಪೂರ್ಣ ನೆಲಸಮ ಮಾಡಲಾಗಿದೆ.

ಈ ಸಂಬಂಧದಲ್ಲಿ ಎಂ. ಎಲ್. ಸಿ. ಅವರಿಗೆ ತಾವು ಹಣ ನೀಡಿಲ್ಲವೆಂಬ ಪತ್ರಕ್ಕೆ ಆ ಜನರಿಂದ ಸಹಿ ಪಡೆಯಲು ಪುಟ್ಟಮ್ಮ ಎಂಬ ಏಜೆಂಟಳನ್ನು ಅವರು ಬಿಟ್ಟಿದ್ದಾರೆ. 'ಬುದ್ಧಿಯವರ' ಆದೇಶದಂತೆ ಪುಟ್ಟಮ್ಮ ಸಹಿ ಸಂಗ್ರಹದಲ್ಲಿ ತೊಡಗಿದ್ದಾಳೆ.

[ಕೊನೆಯ ಪುಟನೋಡಿ]

ತಿತಿಮತಿಯಲ್ಲೂ ಬಡರೈತರ ಮೇಲೆ ಸರಕಾರದ ದೌರ್ಜನ್ಯ.

(ಪಂಚಮ ಪ್ರತಿನಿಧಿಯಿಂದ)

ಬಡವರ ಬಲಿಗೆ ಸರ್ಕಾರ ಈಗ ಸಜ್ಜಾದಂತಿದೆ, ಎಲ್ಲೆಡೆಯೂ ಗುಡಿಸಲುವಾಸಿಗಳನ್ನು ನಿರ್ನಾಮಗೊಳಿಸಲಾಗುತ್ತಿದೆ. ಮಡಿಕೇರಿ ಜಿಲ್ಲೆಯ ತಿತಿಮತಿ ಅರಣ್ಯದಲ್ಲಿ ನೆಲೆಸಿದ್ದ ಬಡವರ ಗುಡಿಸಲುಗಳನ್ನು ಉರುಳಿಸಿ ನೆಲಸಮ ಮಾಡಲಾಗುತ್ತಿದೆ. ಸುಮಾರು 30-40 ವರ್ಷಗಳಿಂದ ತಿತಿಮತಿಯಲ್ಲೇ ಕಾಡುಕಡಿದು ನೆಲೆ ಮಾಡಿದ್ದ 300 ಬಡರೈತ ಕುಟುಂಬಗಳನ್ನು ಅಲ್ಲಿನ ಅರಣ್ಯ ಅಧಿಕಾರಿಗಳು ಜೀವಸಹಿತ 'ತಿಥಿ' ಮಾಡುತ್ತಿದ್ದಾರೆ. ರಕ್ತಬಸಿದು ಫಲವತ್ತುಗೊಳಿಸಿದ ಭೂಮಿಯಿಂದ ಬಂಜರು ಗೋಡ್ಲೂರು ಪ್ರದೇಶಕ್ಕೆ ಒಕ್ಕಲೆಬ್ಬಿಸಿ ದೂಡುತ್ತಿದ್ದಾರೆ. ಹಾಡುಹಗಲಿನ ದರೋಡೆಯಂತೆ ಮನೆಗೆ ನುಗ್ಗಿ ಹೆಂಗಸು-ಮಕ್ಕಳನ್ನದೆ ಹೊರಗೆಳೆದು ಜೋಪಡಿಗಳಿಗೆ ಅರಣ್ಯ ಅಧಿಕಾರಿ

[ಕೊನೆಯ ಪುಟನೋಡಿ]

ದಲಿತ ನುಡಿ

ನಮ್ಮ ಹಕ್ಕುಗಳನ್ನು ಅನ್ಯಾಯವಾಗಿ ಅಪಹರಿಸಿದವರಿಂದ ಪುನಃ ಪಡೆಯಲು ಯಾಚನೆ, ಬೇಡಿಕೆ, ವಿನಂತಿಗಳಿಂದ ಪ್ರಯೋಜನವಿಲ್ಲ. ಅದಕ್ಕೆ ಅವಿಶ್ರಾಂತವಾದ ಹೋರಾಟವೊಂದೇ ಮಾರ್ಗ.

ಈ ದೇಶದಲ್ಲಿನ ಅಧಿಕಾರಕ್ಕೆ, ಸಂಪತ್ತಿಗೆ ವಾರಸುದಾರರಾಗಿ ಅಲ್ಪಸಂಖ್ಯಾತರು, ಸಾಮಾಜಿಕವಾಗಿ ಹಿಂದುಳಿದವರು ಈಜಾತಿ ವ್ಯವಸ್ಥೆಯನ್ನು ತುಳಿದು ಧ್ವಂಸಮಾಡಿ ಏಕತೆಯಿಂದ ಒಂದೇ ಸಿದ್ಧಾಂತದ ಆಧಾರದ ಮೇಲೆ ನಿಂತು ಹೋರಾಡಬೇಕು. ಪಾಲುದಾರರಾಗಬೇಕು. —ಅಂಬೇಡ್ಕರ್

ಜಮೀನು ಕಳೆದುಕೊಂಡ ದಲಿತರು ಈಗ ಕೋರ್ಟಿಗೆ ಅಲೆತ

[ಪಂಚಮ ಪ್ರತಿನಿಧಿಯಿಂದ]

ಕೋಲಾರ ಜಿಲ್ಲೆಯ ಐವಾರಹಳ್ಳಿಯಲ್ಲಿ ಅಲ್ಲಿನ ಭೂಮಾಲೀಕ ನಾರಾಯಣಸ್ವಾಮಿನಾಯಿಡು ಜಮೀನು ತಗಾದೆ ಕ್ರೋಧದಿಂದ ವಿನಾಕಾರಣ ದಲಿತರ ಮೇಲೆ ಪೋಲೀಸ್ ದೂರು ಕೊಟ್ಟು ಕಿರುಕುಳ ಕೊಡುತ್ತಿರುವುದು ತಿಳಿದು ಬಂದಿದ್ದು, ಈಗ ದಲಿತರು ಕೂಲಿ ನಾಲಿ ಬಿಟ್ಟು ಕೊರ್ಟು, ಕಛೇರಿ ಅಲೆಯುವಂತಾಗಿದೆ.

ಐವಾರಹಳ್ಳಿ ಬಂಗಾರಪೇಟೆ ತಾಲ್ಲೂಕಿನ ಒಂದು ಹಳ್ಳಿ ಇಲ್ಲಿ ದಲಿತರ 20 ಕುಟುಂಬಗಳಿವೆ. ಎರಡು ಕುಟುಂಬಗಳು ಮಾತ್ರ ಸ್ವಲ್ಪ ಜಮೀನು ಹೊಂದಿದ್ದು ಇನ್ನುಳಿದವರೆಲ್ಲ ಭೂ ಹೀನ ಕೃಷಿ ಕೂಲಿಗಳು.

ಇದೇ ಊರಿನ ನಾರಾಯಣಸ್ವಾಮಿ ನಾಯಿಡು ಟ್ರಾಕ್ಟರ್, ಬಂದೂಕ ಹೊಂದಿರುವ 400 ಎಕರೆ ಭೂಮಾಲೀಕ.

ಇಲ್ಲಿನ ದಲಿತರು ಹಿಂದೆ ಅಲ್ಪಸ್ವಲ್ಪ ಜಮೀನು ಹೊಂದಿದ್ದರು. ಆಪತ್ತುಬಂದಾಗ ನಾಯ್ಡುವಿನಿಂದ ಈಸಿಕೊಂಡ ಅಲ್ಪ ಹಣಕ್ಕಾಗಿ ತಮ್ಮ ಇಡೀ ಜಮೀನನ್ನೇ ಇಂದು ಕಳೆದುಕೊಂಡಿರುವರು. ಉದಾಹರಣೆಗೆ: ದರಖಾಸ್ತಿನಲ್ಲಿ ಮಂಜೂರಾಗಿಧ್ದ ಸ. ನಂ. 13ರಲ್ಲಿಯ 4-4 ಎಕರೆಯನ್ನು ಕೇವಲ 40 ರೂ. ಮತ್ತು 50 ರೂ. ಗಳಿಗೆ ಮರಿಸ್ವಾಮಿ ಮತ್ತು ದಿ॥ ಗಂಟಪ್ಪನವರಿಂದ ನಾಯಿಡು ಕಸಿದು ಕೊಂಡಿದ್ದಾನೆ.

ಇದೇ ಊರಿನ ಇನ್ನೊಬ್ಬ ದಲಿತ ವೆಂಕಟಪ್ಪ ತನ್ನ ಇನಾಮತಿ ಜಮೀನು ಸ. ನಂ, 20 ರಲ್ಲಿ ಸರ್ಕಾರದಿಂದ ಸಾಲ ಪಡೆದು ಬಾವಿ ತೋಡಿಸಿದ. ಹಣ ಸಾಲದೆ ನಾಯಿಡುವಿನಿಂದ ಒಂದಿಷ್ಟು ಹಣ ಪಡೆದ. ಅನಕ್ಷರಸ್ಥನಾಗಿರುವ ವೆಂಕಟಪ್ಪನನ್ನು ವಂಚಿಸಿದ ನಾಯಿಡು 10.000 ರೂ. ಗಳಿಗೆ 'ಆನ್ ಡಿಮ್ಯಾಂಡ್ ಪ್ರೋನೋಟ್' ಬರೆಸಿಕೊಂಡಿದ್ದು ಸಾಲಕ್ಕಂತ ಜಮೀನನ್ನು ತನ್ನ ಹೆಸರಿಗೇ ಮಾಡಿಸಿಕೊಂಡು, ಪಹಣಿ ಇತ್ಯಾದಿ ಪಡೆದುಕೊಂಡಿದ್ದಾನೆ· ತಹಶೀಲ್ದಾರರು ಹಣತಿಂದು ಮಹಜರು ಮಾಡದೇನೇ ದಾಖಿಲು ಪತ್ರವನ್ನು ನಾಯ್ಡು ಹೆಸರಿಗೇ ವಿತರಣೆ ಮಾಡಿದ್ದಾರೆ. ಈ ಮೋಸ ಅರಿತ ವೆಂಕಟಪ್ಪ ದಾವೆ ಹೂಡಿರುವರು. ತಹಶೀಲ್ದಾರ್ ಕೋರ್ಟ್ ಮತ್ತು ಜಿಲ್ಲಾಧಿಕಾರಿಗಳ ಕೋರ್ಟ್‌ಗಳಲ್ಲಿ ತೀರ್ಪು ಸಿಕ್ಕದಿದ್ದು ಈಗ ಅದು ಡಿವಿಜನಲ್ ಕಮಿಷನರ್ ಕೊರ್ಟಿನಲ್ಲಿ ನಡೆಯುತ್ತಿದೆ.

ನಾಯಿಡುವಿನ ಇಂಥವೇ ಮೋಸದಿಂದ ಜಮೀನು ಕಳೆದುಕೊಂಡ ದಲಿತರು ಈಗ ಎಚ್ಚೆತ್ತುಕೊಂಡು ತಮ್ಮ ತಮ್ಮ ಜಮೀನನ್ನು ಮತ್ತೆ ಪಡೆಯಲು ಸರ್ಕಾರ, ಕಾನೂನು ಅನ್ನುತ್ತಿರುವುದು ನಾಯಿಡುವಿಗೆ ಸಿಟ್ಟು ಬರಿಸಿದೆ. ಈ ಕ್ರೋದದಿಂದ ನಾಯಿಡು ಆಗಾಗ ದಲಿತರ ಮೇಲೆ ಗಲಾಟೆ ಮಾಡಿ ಪೋಲೀಸ್‌ಗೆ ದೂರು ಕೊಡುತ್ತಿದ್ದು. ಲಂಚ ಪಡೆದ ಪೋಲೀಸರು ದಲಿತರನ್ನು ಪೋಲೀಸ್ ಠಾಣೆಗೆ ಎಳೆದೊಯ್ದು ಕಿರುಕುಳ ಕೊಡುತ್ತಿರುವುದು ತಿಳದು ಬಂದಿದೆ. ಕೂಲಿ ಮಾಡಿಯೇ ಬದುಕುವ ದಲಿತರು ಈಗ ಅದನ್ನೂ ಬಿಟ್ಟು ಹೊಟ್ಟೆಗಿಲ್ಲದೆ ಪೋಲೀಸ್ ಠಾಣೆ ಕೊರ್ಟು, ಕಚೇರಿ ಅಲೆಯಬೇಕಾಗಿದೆ.

ವಿಚಾರ ವೇದಿಕೆ

ಪ್ರಿಯ ಓದುಗರೇ,

ಬಿಹಾರದಂತೆ ಕರ್ನಾಟಕದಲ್ಲೂ ದಲಿತರಿಗೆ ರಕ್ಷಣೆಗಾಗಿ ಶಸ್ತ್ರಾಸ್ತ್ರ ನೀಡಬೇಕೆಂದು ಪ್ರಗತಿಪರರು ಮತ್ತು ದಲಿತ ಬರಹಗಾರರು ಸೇರಿ ಕಳೆದ ತಿಂಗಳು ಬೆಂಗಳೂರಿನಲ್ಲಿ ನಡೆಸಿದ ಬಂಡಾಯ ಸಾಹಿತ್ಯ ಸಮ್ಮೇಳನ ನಿರ್ಣಯಮಾಡಿ ಸರ್ಕಾರವನ್ನು ಒತ್ತಾಯಪಡಿಸಿತು. ಅಂತೆಯೇ ರಾಜ್ಯದಲ್ಲಿ ವ್ಯಾಪಕ ಸಂಘಟನೆ ಹೊಂದಿರುವ ದಲಿತ ಸಂಘರ್ಷ ಸಮಿತಿಯೂ ಅಂತಹ ಬೇಡಿಕೆಯನ್ನು ಮುಂದಿಟ್ಟು ಸರ್ಕಾರವನ್ನು ಒತ್ತಾಯಿಸ ತೊಡಗಿದೆ. ಈ ಒತ್ತಾಯದ ಕರೆ ಬಗ್ಗೆ ಇಂದು ಸಾಮಾನ್ಯನಿಂದ ಹಿಡಿದು ಪ್ರಜ್ಞಾವಂತರೆಲ್ಲ ಗಂಭೀರವಾಗಿ ಯೋಚಿಸಬೇಕಾಗಿದೆ.

ಇಂದು ದಲಿತರ ಕೊಲೆ-ಸುಲಿಗೆಗಳು ನಡೆಯದ ದಿನಗಳೇ ಇಲ್ಲವೇನೋ ಎಂಬ ಅತಿರೇಕದ ಸ್ಥಿತಿ ದೇಶಾದ್ಯಂತ ಉಂಟಾಗಿದೆ. ಇಂತಹ ತೀವ್ರ ಪರಿಸ್ಥಿತಿಯ ಒತ್ತಡದಿಂದ ಬಿಹಾರ ಸರ್ಕಾರವೇ ಅನಿವಾರ್ಯವಾಗಿ ದಲಿತರಿಗೆ ರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನು ನೀಡಲು ಮುಂದೆ ಬಂದಿದೆ. ಇದು ಸ್ವಾಗತಾರ್ಹ. ಏಕೆಂದರೆ ಅಲ್ಲಿನ ಪರಿಸ್ಥಿತಿ ಅಷ್ಟು ಪಕ್ವಗೊಂಡಿದೆ. ಹುಟ್ಟಿದ ನೆಲದಲ್ಲೇ ಕೇವಲ ಉಸಿರು ಉಳಿಸಿಕೊಳ್ಳಲು ದಲಿತರಿಗೆ ಬದುಕೇ ಒಂದು ಸವಾಲಾಗಿ ಬಂದ ವಿಪತ್ತಿನ ಪರಿಸ್ಥಿತಿ ತೀರಾ ಖಂಡನೀಯ. ಇಂತಹ ಸ್ಥಿತಿ ಬಿಹಾರಕ್ಕಷ್ಟೇ ಮೀಸಲಾಗಿಲ್ಲ. ಕರ್ನಾಟಕವೂ ಸೇರಿದಂತೆ ಈ ವಿಷಮಸ್ಥಿತಿ ಎಲ್ಲೆಡೆಯೂ ಹಬ್ಬಿ ಆವರಿಸಿದೆ. ಆದ್ದರಿಂದ ಎಲ್ಲಾ ದಲಿತರಿಗೂ ಶಸ್ತ್ರಾಸ್ತ್ರದ ಅಗತ್ಯ ಬಂದಿರುವುದಕ್ಕೆ ಈ ಸಮಾಜವೇ ಹೊಣೆಯಲ್ಲದೆ ಮತ್ತಾರು ಅಲ್ಲ.

ಕರ್ನಾಟಕದ ದಲಿತರಿಗೆ ತಮ್ಮ ಮಿತ್ರರ್ಯಾರು? ಶತ್ರುಗಳು ಯಾರು? ಎಂಬ ಬಗ್ಗೆ ನಿಚ್ಚಳ ಅರಿವಿಲ್ಲ. ತಮ್ಮ ದಲಿತ ಜಗತ್ತಿನಲ್ಲೇ ಆರ್ಥಿಕವಾಗಿ ಮುಂದುವರೆದವರಿಂದ ನಡೆಯುತ್ತಿರುವ ಶೋಷಣೆ ಹಾಗೂ ಹೊರ ಜಗತ್ತಿನ ಇತರರಿಂದ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಗಾಗಿ ನಡೆಯುವ ದಬ್ಬಾಳಿಕೆ, ಉಂಟಾಗುವ ಘರ್ಷಣೆ-ಶೋಷಣೆ ಬಗ್ಗೆ ಸಾಕಷ್ಟು ಸ್ಪಷ್ಟತೆ ಇಲ್ಲ. ಹೀಗಿರುವ ಈವತ್ತಿನ ಸ್ಥಿತಿಯಲ್ಲಿ ದಲಿತರಿಗೆ ಶಸ್ತ್ರಾಸ್ತ್ರದ ಅಗತ್ಯತೆ. ಉಪಯುಕ್ತತೆ ಮತ್ತು ಅದರಿಂದುಂಟಾಗುವ ಪರಿಣಾಮಗಳ ಬಗ್ಗೆ ಇಂದು ಚರ್ಚೆ ವಿಚಾರ ಅಗತ್ಯವಾಗಿದೆ. ಆದ್ದರಿಂದ ಈ ಸಂಬಂಧದಲ್ಲಿ ಕೆಳಕಂಡ 5ಪ್ರಶ್ನೆಗಳಿಗೆ ಪಂಚಮ ನಿಮ್ಮಿಂದ ಉತ್ತರ ಬಯಸಿದೆ. ನೀವು ಕಳುಹಿಸುವ ಉತ್ತರಗಳನ್ನು ಮುಂದಿನ ಸಂಚಿಕೆಯಿಂದ ಪ್ರಕಟಿಸಲಾಗುವುದು. ಉತ್ತರ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಿಗೆ ಮೀರಿರಬಾರದು.

1. ಬಿಹಾರದ ಪರಿಸ್ಥಿತಿಯ ತೀವ್ರತೆಗೂ ಕರ್ನಾಟಕದಲ್ಲಿನ ಪರಿಸ್ಥಿತಿಗೂ ವ್ಯತ್ಯಾಸವಿದೆಯೇ ?

2. ಕರ್ನಾಟಕದ ಹಳ್ಳಿಯ ಅನಕ್ಷರಸ್ಥ ದಲಿತನಿಗೆ ತನ್ನ ವರ್ಗಶತ್ರು ಯಾರೆಂಬುದರ ಬಗ್ಗೆ ತಿಳುವಳಿಕೆ ಇದೆಯೆ?

3. ಸರ್ಕಾರವೇ ಶಸ್ತ್ರಾಸ್ತ್ರ ನೀಡುವುದಾದರೆ ದಲಿತರ ಕೈಯಲ್ಲಿ ಬಂದೂಕವಿದ್ದರೂ ಅದರ 'ಕುದುರೆ (ಟ್ರಿಗರ್) ಯಲ್ಲಿ ಆಳುವ ವರ್ಗದ ಬೆರಳಿರುವುದಿಲ್ಲವೆ ?

4. ದಲಿತರಿಗೆ ಶಸ್ತ್ರಾಸ್ತ್ರ ನೀಡಿದರೆ ಅವರ ಬದುಕು ಮತ್ತು ಸಮಾಜದ ಬದಲಾವಣೆ ಮೇಲೆ ಉಂಟಾಗಬಹುದಾದ ಪರಿಣಾಮ ಏನು ?

5. 'ದಲಿತರಿಗೆ ಶಸ್ತ್ರಾಸ್ತ್ರ ನೀಡಿದರೆ ಬಹಿರಂಗ ಹಿಂಸಾಚಾರಕ್ಕೆ ಆಹ್ವಾನ ನೀಡಿದಂತಾಗುತ್ತದೆ' ಎಂಬ ಇಂದಿರಾಗಾಂಧಿ ಹೇಳಿಕೆ ಮತ್ತು 'ಭೂಮಾಲೀಕರಿಗೆ ಕೊಟ್ಟಿರುವ ಬಂದೂಕಗಳನ್ನು ಹಿಂತೆಗೆದುಕೊಳ್ಳಬೇಕು' ಎಂಬ ಜಗಜೀವನರಾಂ ಅವರ ಹೇಳಿಕೆಗೆ ನಿಮ್ಮ ಅಭಿಪ್ರಾಯ ಏನು ?

—ಸಂಪಾದಕ

ಜಮೀನು ವಿವಾದ : ದಲಿತ ಕುಟುಂಬ ಬೀದಿಪಾಲು

[ನಮ್ಮ ಪ್ರತಿನಿಧಿಯಿಂದ]

ಕಳೆದ ಫೆಬ್ರವರಿ ತಿಂಗಳು ಹುಣಸೂರಿನ ಹತ್ತಿರದ ಬಸಮ್ಮನಕಟ್ಟೆಯಲ್ಲಿ ವಾರಕ್ಕೆ ಕೊಟ್ಟಿದ್ದ ಜಮೀನನ್ನು ತನ್ನಂತೆ ಮಾಡಿಕೊಳ್ಳಲು ಸವರ್ಣೀಯ ಜಮೀನುದಾರನು ದಲಿತ ಕುಟುಂಬವನ್ನು ಗುಡಿಸಿಲಿನಿಂದ ಹೊರಗಟ್ಟಿ, ಗುಡಿಸಿಲಿಗೆ ಬೆಂಕಿ ಇಟ್ಟು ಬೀದಿಪಾಲು ಮಾಡಿರುವ ಘಟನೆ ನಡೆದಿದೆ.

ಬಸಮ್ಮನಕಟ್ಟೆ ಅಥವಾ ಟೈಗರ್ ಬ್ಲಾಕ್ ಎಂದು ಕರೆಯುವ ಊರಿಗೆ ಹುಣಸೂರಿನಿಂದ ಸುಮಾರು 13 ಮೈಲಿಗಳ ಅಂತರವಿದೆ. ಇಲ್ಲಿನ ದಲಿತರಾದ ಕರಪಯ್ಯ ಮತ್ತು ಆತನ ಇಬ್ಬರು ಅಣ್ಣಂದಿರು ಅದೇ ಊರಿನ ಜಮೀನ್ದಾರ ಮುದ್ದುವೀರೇಗೌಡನ 4 ಎಕರೆ (ಸ. ನಂ, 163) ಜಮೀನನ್ನು ವಾರದ ಕರಾರಿನ ಮೇಲೆ ಸಾಗುವಳಿ ಮಾಡುತ್ತಿದ್ದು-ಅದರಂತೆ ಬೆಳೆದ ಬೆಳೆಯಲ್ಲಿ ಅರ್ಧ ಗೌಡನಿಗೆ ಇನ್ನರ್ಧ ಇವರಿಗೆ. ಇದು ಹೀಗೆ ಕಳೆದ 9 ವರ್ಷಗಳಿಂದಲೂ ನಡೆದುಕೊಂಡು ಬಂದಿತ್ತು. ಅಗಿನಿಂದಲೂ ಕರಪಯ್ಯನು ಅದೇ ಜಮೀನಿನಲ್ಲೇ ಒಕ್ಕಡೆ ಗುಡಿಸಲು ಕಟ್ಟಿಕೊಂಡು ವಾಸವಾಗಿದ್ದನು.

ಜಮೀನು ಬಿಡಲು ಒತ್ತಾಯ

ಈಚೆಗೆ ಮುದ್ದುವೀರೇಗೌಡನು ತನ್ನ ಜಮೀನನ್ನು ತನಗೆ ಬಿಟ್ಟುಕೊಡಲು ಕರಪಯ್ಯನನ್ನು ಒತ್ತಾಯಪಡಿಸುತ್ತಿದ್ದನು. ಕರಪಯ್ಯನ ಅಣ್ಣಂದಿರಿಗೆಬಂದಿಪ್ಪಾದರೂ ಬೇರೆ ಜಮೀನಿದ್ದು ಈತನಿಗೆ ಈ ಜಮೀನು ಬಿಟ್ಟು ಬೇರೆ ಗತಿಯೇ ಇಲ್ಲದುದರಿಂದ ಅವನು ಅದಕ್ಕೇ ಅಂಟಿಕೊಂಡಿದ್ದನು.

ಜಮೀನು ಬೇರೊಬ್ಬರ ಹೆಸರಿಗೆ

ಹೀಗಿರಲು ಫೆಬ್ರವರಿಯಲ್ಲಿ ಸರಕಾರದ ವತಿಯಿಂದ ಜಮೀನುಗಳನ್ನು ಸರ್ವೆಮಾಡಲು ಅಧಿಕಾರಿಗಳು ಬಂದರು. ಆಗ ಕರಪಯ್ಯ ಮತ್ತು ಆತನ ಅಣ್ಣಂದಿರು "9 ವರ್ಷಗಳಿಂದಲೂ ತಾವೇ ಈ ನಾಲ್ಕು ಎಕರೆ ಜಮೀನನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆಂದು" ಅಧಿಕಾರಿಗಳಿಗೆ ತಿಳಿಸಿದರೂ ಅವರು ಇವರ ಹೇಳಿಕೆಯನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಸರ್ವೆ ಮಾಡಿದ ನಂತರ ಈ ಜಮೀನು ಬೇರೆಯವರ ಹೆಸರಿಗೆ ಆಗಿರುವುದು ತಿಳಿದು ಬಂತೆಂದು ಕರಪಯ್ಯ ತಿಳಿಸಿರುವನು.

ಹೆಂಡತಿ ಮಕ್ಕಳು ಬೀದಿ ಪಾಲು

ಮಾರನೆ ದಿನ ಫೆ. 24 ರಂದು ಈ ಬಗ್ಗೆ ಜಿಲ್ಲಾಧಿಕಾರಿಗಳನ್ನು ಕಾಣಲು ಕರಪಯ್ಯ ಮೈಸೂರಿಗೆ ಹೋದ. ಆತ ಆ ಕಡೆ ಹೋದ ವಿಷಯ ಗೌಡನಿಗೆ ಗೊತ್ತಾಯಿತು. ಅಂದಿನ ರಾತ್ರಿಯೇ ಅವನು ತನ್ನ ಕಡೆಯ ಗೂಂಡಾಗಳ ಜೊತೆ ರಾತ್ರಿ 2 ಗಂಟೆ ಸಮಯದಲ್ಲಿ ಕರಪಯ್ಯನ ಗುಡಿಸಿಲಿಗೆ ಬಂದು ಅವನ ಹೆಂಡತಿ ಮಕ್ಕಳನ್ನು ಬೆದರಿಸಿ ಆ ಸಮರಾತ್ರಿಯಲ್ಲಿ ಅವರನ್ನು ಹೊರಗಡೆ ದಬ್ಬಿ ಮುಡಕೆ ಕುಡಿಕೆಗಳನ್ನು ಹೊರಗಡೆ ಬಿಸಾಕಿರುವನು.

25ರಂದು ಕರಪಯ್ಯ ಮೈಸೂರಿನಿಂದ ಹಿಂತಿರುಗಿ ಊರಿಗೆ ಬಂದಾಗ ಕಂಡದ್ದು ಮಡಿಕೆ ಕುಡಿಕೆಗಳನ್ನು ಇಟ್ಟುಕೊಂಡು ಗುಡಿಸಿಲಿನ ಹೊರಗೆಮುರದಡಿ ಕುಂತಿದ್ದ ತನ್ನ ಹೆಂಡತಿಮಕ್ಕಳನ್ನು. ಅಂದೇ ಸಾಯಂಕಾಲಹುಣಸೂರಿನ ತಿಟ್ಟು ಹತ್ತಿ ಪೋಲೀಸ್‌ಗೆ ದೂರುಕೊಟ್ಟ. ಪೋಲೀಸರು ಈಗ ಬರುತ್ತೇವೆಂದು ಈತನನ್ನು ವಾಪಸ್ಸು ಕಳಿಸಿದರೇ ವಿನಹಃ ಅವರು ಬಂದು ಯಾವುದೇಕ್ರಮ ತೆಗೆದುಕೊಳ್ಳಲಿಲ್ಲ

ಗುಡಿಸಲು ಭಸ್ಮ

ಊರಿಗೆ ಬಂದ ಕರಪಯ್ಯ ಪೋಲೀಸರು ಬರುವ ನಿರೀಕ್ಷೆಯಲ್ಲೇ ಒಂದು ದಿನ ಕಾದು ಅವರು ಬರದಿದ್ದಾಗ ಮತ್ತೆ ಮಾರನೇ ದಿನ ಅಂದರೆ 27 ರಂದು ಹುಣಸೂರು ಹತ್ತಿದ. ಪೋಲೀಸರ "ಈಗ ಬಂದೆವು" ಅಂದ ಮಾತನ್ನೇ ನಂಬಿ ಜೊತೆಯಲ್ಲೇ ಹೋಗಲು ನಿರ್ಧರಿಸಿ ಠಾಣೆಯ ಬಾಗಿಲಲ್ಲೇ ಕುಳಿತ. ಸಂಜೆಯಾಯಿತು, ರಾತ್ರಿಯಾಯಿತು. ಪೋಲೀಸರೇನೂ ಬಸಮ್ಮನಕಟ್ಟೆಗೆ ಹೋಗುವ ಮನಸ್ಸು ಮಾಡಲಿಲ್ಲ.

ಈ ಕಡೆ ಮುದ್ದುವೀರೇಗೌಡ ಕರಪಯ್ಯನಿಲ್ಲದ ಸಮಯಕ್ಕೇ ಕಾದಿದ್ದವನು ರಾತ್ರಿ ತನ್ನವರ ಜೊತೆಗೂಡಿ ಮತ್ತೆ ಕರಪಯ್ಯನ ಹೆಂಡತಿ ಮಕ್ಕಳನ್ನು ಬೆದರಿಸಿ ಇನ್ನೂ ಕಳದಲ್ಲಿಯೇ ಇದ್ದ ಈ ವರ್ಷದ ಪಸಲು 60 ಪಲ್ಲ ಬತ್ತ ಮತ್ತು ಹುಲ್ಲನ್ನು ಚೂರೂ ಬಿಡದೆ ಸಾಗಿಸಿಕೊಂಡ. ನಂತರ ಗುಡಿಸಿಲಿಗೆ ಬೆಂಕಿ ಹಚ್ಚಿ ಭಸ್ಮಮಾಡಿರುವನು.

ಸರ್ಕಾರಿ ಭೂಮಿಯಲ್ಲಿ ಹೂದೋಟ: ದಲಿತನ ಮೇಲೆ ದೌರ್ಜನ್ಯ

[ನಮ್ಮ ಪ್ರತಿನಿಧಿಯಿಂದ]

ಕೋಲಾರ ಬಳಿಯ ಪೇಟೆಚಾಮನಹಳ್ಳಿಯ ದಲಿತವರ್ಗದ ಮಿಲಿಟರಿ ಮುನಿಶ್ಯಾಮಪ್ಪ ಎಂಬುವವರನ್ನು ಮಾರ್ಚ್ 22ರಂದು ರಾತ್ರಿ ಸುಮಾರು 8-30ರಲ್ಲಿ ಊರಿನ ಛೇರ್ಮನ್ ಕೆ.ಮುನಿವೆಂಕಟರೆಡ್ಡಿ ಹಾಗೂ ಆತನ ಗೂಂಡಾಗಳು ಕೋಲು ಹಾಗೂ ಕಲ್ಲುಗಳಿಂದ ಹೊಡೆದು ತೀವ್ರ ಗಾಯಗೊಳಿಸಿದ್ದಾರೆ. ಹೊಡೆತಕ್ಕೆ ಬಲಿಯಾದ ಮುನಿಶ್ಯಾಮುಪ್ಪರಿಗೆ ಬೆನ್ನು, ಕಣ್ಣು. ಮೊಣಕಾಲು ಮೇಲೆ ಗಾಯಗಳಾಗಿವೆ.

ಮುನಿಶ್ಯಾಮಪ್ಪನು ತನ್ನ ಮನೆಯ ಮುಂದೆ ಇರುವ ಎರಡೂವರೆ ಗುಂಟೆ ಸರ್ಕಾರಿ ಜಮೀನಿನಲ್ಲಿ ಹೂದೋಟ ಮಾಡಿಕೊಂಡಿದ್ದು ಅದನ್ನು ತೆರವು ಮಾಡಲು ಛೇರ್ಮನ್ ಮುನಿವೆಂಕಟರೆಡ್ಡಿ ಒತ್ತಾಯಿಸುತ್ತಲೇ ಬಂದಿದ್ದ. ತನ್ನ ತಂದೆಯ ಕಾಲದಿಂದಲೂ ಇರುವ ಆ ಜಮೀನನ್ನು ತನಗೆ ಕೊಡಬೇಕೆಂದು ಮುನಿಶ್ಯಾಮಪ್ಪ ಜಿಲ್ಲಾ ಅಸಿಸ್ಟೆಂಟ್ ಕಮೀಷನರ್‌ರವರಲ್ಲಿ ಅರ್ಜಿಸಲ್ಲಿಸಿ ಮನವಿ ಮಾಡಿಕೊಂಡಿದ್ದ. ಇದನ್ನು ತಿಳಿದ ಮುನಿವೆಂಕಟರೆಡ್ಡಿ ಸಿಟ್ಟಿಗೆದ್ದು ಆತನ ಮೇಲೆ ಹಲ್ಲೆ ನಡೆಸಿದನೆಂದು ಹೇಳಲಾಗಿದೆ.

ಹಲ್ಲೆಯಿಂದ ಗಾಯಗೊಂಡ ಮುನಿಶ್ಯಾಮಪ್ಪ ದೂರು ಕೊಡಲು ಕಸಬಾ ಪೋಲೀಸ್ ಠಾಣೆಗೆ ಹೋದಾಗ, ದೌರ್ಜನ್ಯ ಎಸಗಿದ್ದ ಮುನಿವೆಂಕಟರೆಡ್ಡಿಯು ಮೊದಲೇ ದೂರು ನೀಡಿದ್ದ. ಆತನ ದೂರಿನ ಮೇಲೆ ಪೋಲೀಸರು ಮುನಿಶ್ಯಾಮಪ್ಪನನ್ನೇ ಬಂಧಿಸಿದರು.

ದೌರ್ಜನ್ಯಕಾರರ ಬೆಂಬಲವಾಗಿ ನಿಂತ ಪೋಲೀಸರ ಈ ವರ್ತನೆ ವಿರುದ್ಧ ರಾಜ್ಯ ದಲಿತ ಸಂಘರ್ಷ ಸಮಿತಿಯ ಕೋಲಾರ ಶಾಖೆ ಕಾರ್ಯಕರ್ತರು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರವರಿಗೆ ದೂರು ನೀಡಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದ್ದಾರೆ.

ಹುಂಜ

● ಮರಾಠಿ ಮೂಲ :

ದಯಾ ಪವಾರ್

● ಅನುವಾದ :

ಬಾಲಚಂದ್ರ ಜಯಶೆಟ್ಟಿ

ಕೊಂದರ‍್ಯಾರವ್ವ ನನ ಹುಂಜನ
ಈ ಹುಂಜಿನ ಕಾಲಾಗ ಆಗೈತಿ
ನನ ಜೀವ ಸಣ್ಣಾಕ ಸೊರಗಿ ॥
ನನ ಹುಂಜಿನ ತುರಾಯಿ, ಕೆಂಪು
ರುಮಾಲ ಹಾರ‍್ಯಾಡಿದಾಂಗ
ಅದರ ನೆತ್ತರ ಚಿಮ್ಮಿ
ಹೊಳೆ ಹಳ್ಳಕ ಹರದೈಲೆ ॥
ಕೊಂದರ‍್ಯಾರವ್ವ.... ।೧।

ನನ ಹುಂಜಿನ ಪುಕ್ಕ
ಹರಿದೆಸೆದಾಂಗ ಅಂಗಿ
ಗಾಳಿಗೆ ತೂರಿದ ಚಿಂದಿ
ಮಾಡಿ ದೇಹವ ಚಿಂದಿ ಚಿಂದಿ ।
ಕೊಂದರ‍್ಯಾರವ್ವ.... ।೨।

ನನ ಹುಂಜಿನ ಕಣ್ಣು
ಚಿರತೆ ಮೈಯಂಥ ಕಣ್ಣು
ಚುಚ್ಚಿದರವ್ವ ಕಾದ ಕಂಬಿ
ಸನಾದಿಗಿ ತೂತು ಕೊರೆದಾಂಗ ।
ಕೊಂದರ‍್ಯಾರವ್ವ.... ।೩।


ಊರೂರಿಗೇನೆ ಎಬ್ಬಿಸತಿತ್ತ
ನನ ಹುಂಜಿನ ಕೂಗು
ಆ ದನಿಯ ಮಾಡಿದರು ಮೂಕ
ಯಾರು ಹಿಸುಕಿದರಾ ಕತ್ತ ?
ಕೊಂದರ‍್ಯಾರವ್ವ.... ।೪।

ಗುಡ್ಡಕ್ಕೆ ಹತ್ತಲಿ ಬೆಂಕಿ
ಮೆಲ್ಲಮೆಲ್ಲನೆ ಹಬ್ಬಲಿ ಜ್ವಾಲೆ
ಏಟೊಂದು ಮರಗಳು ಹಾಯಲಿ
ಎಲ್ಲಿ ಕಾಣಲಿ ಅದರ ದಾರಿನ ।
ಕೊಂದರ‍್ಯಾರವ್ವ.... ।೫।

[ಬೆಲ್ಚಿಯಲ್ಲಿ ನಡೆದ ಅಮಾನುಷ ನರಬಲಿಯಲ್ಲಿ ಕೊಲೆಗೀಡಾದ ಒಬ್ಬ ದಲಿತ ಕ್ರಾಂತಿಕಾರನ ಹೆಣವೂ ಅವನ ಹೆಂಡತಿಗೆ ಸಿಕ್ಕದಿದ್ದಾಗ ತನ್ನ ಗಂಡನಿಗೆ ಹುಂಜದ ಪ್ರತೀಕ ಕೊಟ್ಟು ತೋರಟ ಅವಳ ಒಡಲಾಳದ ಹುಯ್ಯಲು ಈ ಜಾನಪದ ಶೈಲಿಯ ಗೀತೆ]

ದಲಿತರು ಒಂದಾದರೆ ಏನ

"ಮಹಾರಾಷ್ಟ್ರದಲ್ಲಿ ದಲಿತರು ಒಂದಾದರೆ ಏನೆಲ್ಲಾ ಮಾಡಬಲ್ಲರು". ಇದು ಮರಾಠಿ ದಲಿತ ಸಾಹಿತಿ ಅರ್ಜುನ ಡಾಂಗಳೆ ಅವರ ಉದ್ಘೋಷ. ಅದಕ್ಕೆ ವಾರ್ಲಿಘಟನೆ, ಸ್ವಾತಂತ್ರ್ಯೋತ್ಸವಗಳಲ್ಲಿ ರಾಷ್ಟ್ರ ಧ್ವಜವನ್ನು ಸುಟ್ಟ ಪ್ರಕರಣಗಳು, ಆರೆಸ್ಸೆಸ್ ಜತೆಗಿನ ಜಗಳ ಮುಂತಾದ ಘಟನೆಗಳನ್ನು ಉದಾಹರಿಸಿ ಹೇಳಿದರು.



ದಯಾಪವಾರ್

ದಲಿತ ಸಾಹಿತ್ಯ ಮತ್ತು ಸಂಘಟನೆಯನ್ನು ದೇಶದ ಇತರೆ ರಾಜ್ಯಗಳಿಂದ ಮಹಾರಾಷ್ಟ್ರ ಮುಂದು. ಅಲ್ಲಿನ ದಲಿತ ಸಾಹಿತ್ಯ ಚಳುವಳಿಯಲ್ಲಿರುವ ಪ್ರಖ್ಯಾತ ಬರಹಗಾರರಾದ ದಯಾಪವಾರ್ ಮತ್ತು ಅರ್ಜುನ ಡಾಂಗಳೆ ಅವರು ಕಳೆದ ತಿಂಗಳು 10, 11ರಂದು ಬೆಂಗಳೂರಿನಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸಿದ್ದಾಗ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಮತ್ತು ಪಂಚಮ ಪ್ರತಿನಿಧಿ ಸಂದರ್ಶನ ನಡೆಸಿದಾಗ ಅಲ್ಲಿನ ಸಾಹಿತ್ಯ-ಸಂಘಟನೆ ಕುರಿತು ಮುಕ್ತವಾಗಿ ಮಾತನಾಡಿದರು.

ಸಾಹಿತ್ಯಕ್ಕಿಂತ ಹೆಚ್ಚಾಗಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿಯ ಆರಂಭ, ಬೆಳವಣಿಗೆ ಮತ್ತು ಅದರ ಇಂದಿನ ಒಡಕುಗಳ ಬಗ್ಗೆ ಮಾತು ನಿರರ್ಗಳವಾಗಿ ಸಾಗಿತು.

ದಲಿತ ಪ್ಯಾಂಥರ್ಸ್ ಸಂಘಟನೆ 1972ರ ಜುಲೈ ತಿಂಗಳಲ್ಲಿ ಆರಂಭವಾಯಿತು. ದಲಿತರ ಬ
ಯದ ಮನೋಭಾವಕ್ಕೆ ಅಂಬೇಡ್ಕರ್
ಹುಟ್ಟಾ ಹೋರಾಟ ಚಿರಸ್ಫೂರ್ತಿ,
ಹೆಚ್ಚು ಆಕರ್ಷಣೀಯವಾಗಿ ಕಂಡ ಬ
ಪ್ಯಾಂಥರ್ಸ್ ಚಳವಳಿ ನಮ್ಮ ಸಂಘಟ
ಹುಟ್ಟಿಗೆ ಕಾರಣವಾಯಿತೆಂದು ದಯಾಪವ
ಮತ್ತು ಡಾಂಗಳೆ ಒತ್ತಿ ಆರಂಭಿಸಿದರು.

ಢಸಾಳೆ ಬಗ್ಗೆ ಮೆಚ್ಚುಗೆ

ನಮ್ಮ ಸಮಕಾಲೀನ ಬರಹಗಾರರಾದ ನ
ದೇವ ಢಸಾಳೆ, ರಾಜಧಾಳೆ, ಜೆ. ವಿ. ಪವ
ಮುಂತಾದ ಗೆಳೆಯರು ಪ್ಯಾಂಥರ್ಸ್ ಸ
ನೆಯ ಸಂಸ್ಥಾಪಕರು. ಮೂಲತಃ ಢ
ತುಂಬಾ ಧೈರ್ಯಶಾಲಿ. ಇಂದಿಗೂ
ಧೈರ್ಯ ಕುಂದಿಲ್ಲ ಎಂದು ಢಸಾಳೆ ವ್ಯಕ್ತಿ
ಬಗ್ಗೆ ಡಾಂಗಳೆ ಮೆಚ್ಚಿಗೆ ಮಾತನ್ನಾಡಿ
ಢಸಾಳೆ ಕಮ್ಯೂನಿಸ್ಟ್ ಸಿದ್ಧಾಂತ ಒಪ್ಪಿಕೊ
ದ್ದರಿಂದ ಪ್ಯಾಂಥರ್ಸ್ ಸಂಘಟನೆಯಲ್ಲಿ ಎ
ಜಾತಿಯ ಬಡವರು, ಕೂಲಿಕಾರರು, ಕಾ
ಕರು ಇರಬೇಕೆಂಬ ಇಚ್ಛೆಯುಳ್ಳವರು. ಅ
ಧಾಳೆಯದು ಹಾಗಲ್ಲ. ಸಂಘಟನೆಗೆ ಸೇರ
ದಿದ್ದರೆ ಮೊದಲು ಆತ ಬೌದ್ಧಮತಾವಲ
ಯಾಗಬೇಕೆಂಬ ಅಭಿಪ್ರಾಯ ಹೊಂದಿದ
ಆದರೂ ಎಲ್ಲರೂ ಒಂದುಗೂಡಿ ಸಂಘ
ಯನ್ನು ಬೆಳೆಸಿದರು ಎಂದರವರು.

ಪ್ಯಾಂಥರ್ಸ್ ಸಂಘಟನೆಯಲ್ಲಿ ಪ್ರಧಾನ ಪ
ಮಹರ್ (ನವ ಬೌದ್ಧರು) ಜನರದ್ದು. ಮಾ
ಗರೆಲ್ಲ (ಮಾದಿಗರು) ಕಾಂಗ್ರೆಸ್ (ಐ) ಒಲವ
ವರು. ಮಹರ್ ಜನರು ಬಹುತೇಕವಾಗಿ ಶಿಕ್ಷಿತ
ಮೇಲಾಗಿ ಅಂಬೇಡ್ಕರ್ ಆ ಜಾತಿಯಲ್ಲಿ ಹುಟ್ಟಿ
ಅವರಿಗೆ ಸ್ಫೂರ್ತಿ. ಆದರಿಂದಾಗಿ ಅವ
ವಿಚಿತ್ರ ಮನೋಭಾವ. ಆದರೆ ಮಾತಂ
ಸ್ಥಿತಿ ಹಾಗಾಗಿಲ್ಲ. ಅವರಿನ್ನು ಕುಲಕಸು
ಗಳನ್ನೇ ಅವಲಂಬಿಸಿದವರು. ಅಕ್ಷರ ಜ್ಞಾನ
ಸಾಕಷ್ಟಿಲ್ಲದ ಕಾರಣ ಅವರಲ್ಲಿ Inferiori
Complex ಹೆಚ್ಚು ಎಂದ ಡಾಂಗಳೆ ಅವ
ಪ್ಯಾಂಥರ್ಸ್ ಸಂಘಟನೆಯಲ್ಲಿ ಅವರೂ ಸಾಕ
ಮುಂದೆ ಇದ್ದಾರೆಂದರು.

ಯೂ ಮಾಡಬಲ್ಲರು : ಡಾಂಗ್ಳೆ

ತಕಿನೆ ಕಾರಣಗಳು

ಶದಾದ್ಯಂತ ಸಂಘಟನೆಯು ಭರವಸೆ ಹುಟ್ಟಿಸಿದ
್ಯಾಂಥರ್ಸ್‌ನ ಈಗಿನ ಒಡಕಿನ ಬಗ್ಗೆ ತಿಳಿಯ
ಬಯಸಲಾಯಿತು. ಮುಂಬೈ ಲೋಕಸಭಾ
ಚುನಾವಣೆಗೆ ಹಾಕಿದ ಬಹಿಷ್ಕಾರದಿಂದ
ಜಕೀಯ ಪಕ್ಷಗಳು ಅನುಸರಿಸಿದ ಕುತಂತ್ರ.
ಾಳೆ-ಢಾಳೆ ನಡುವಿನ ತಾತ್ವಿಕ ಭಿನ್ನಾಭಿಪ್ರಾ
ಗಳು, ಪ್ರಮುಖವಾಗಿ ಮೇಲ್ನೋಟಕ್ಕೆ
ಣಿಸಿಕೊಂಡಿದ್ದ ನಾಯಕರಲ್ಲಿನ ವ್ಯಕ್ತಿಗತ
ಂದಾಳುತನದ ಲಕ್ಷಣಗಳು, ಇದರಿಂದ
ಥರ್ಸ್ ಘಟ್ಟದಲ್ಲಿ ಉಂಟಾದ ವ್ಯಕ್ತಿಪ್ರತಿಷ್ಟೆ
ಗೌರವ ಮುಂತಾದ ಬೆಳವಣಿಗೆಗಳು ಒಡಕಿಗೆ
ೂಲ ಕಾರಣ ಎಂದು ಡಾಂಗಳೆ-ಪವಾರ್
ಸ್ಪಪಡಿಸಿದರು.

ಅಂತೆಯೇ ದಲಿತರ ಬದುಕಿನ ನೈಜತೆಯನ್ನು ಸಾಹಿತ್ಯದ ಮೂಲಕ ಚಿತ್ರಿಸುವುದರಲ್ಲಿ ದಲಿತ ಬರಹಗಾರರು ಸಾಕಷ್ಟು ಯಶಸ್ವಿಯಾದರು ಎಂದ ಅವರು ಸಂಘಟನೆಯ ಮುಂಚೂಣಿಯಲ್ಲಿರುವ ಢಸಾಳೆ, ಢಾಳೆ, ಜೆ. ವಿ. ಪವಾರ್ ಅರುಣ್ ಕಾಂಬ್ಳೆ ಮುಂತಾದ ಬರಹಗಾರರನ್ನೂ ಹೆಸರಿಸಿದರು.

(ಕೊನೆಯ ಪುಟನೋಡಿ)



ಅರ್ಜುನ ಡಾಂಗಳೆ

ಪಂಚಮ ಸಂದರ್ಶನ

ಗಾಗಿ ಸಂಘಟನೆ ತನ್ನ ತಾತ್ವಿಕ ನೆಲೆಯಿಂದ
ುರಳಿ ಈಗ ನಾಲ್ಕು ಗುಂಪುಗಳಾಗಿದೆ. ಮುಖ್ಯ
ಗಿ ಢಸಾಳೆ, ಅರುಣ್‌ಕಾಂಬ್ಳೆ ಗುಂಪುಗಳು.
ಳೆ ಪ್ರತ್ಯೇಕವಾಗಿ Mass movement
ುದಾಯ ಚಳುವಳಿ) ನ್ನು ಕಟ್ಟಿದ್ದಾರೆ.
ಾಠವಾಡ ಘಟನೆ ನಡೆದನಂತರ ಮತ್ತೆ
ಮುಗೂಡಲು ಯತ್ನಿಸಲಾಗುತ್ತಿದೆ ಎಂದು
ಮಾಧಾನದ ಸಂಗತಿ ತಿಳಿಸಿದರು.

್ಕ ಜತೆ ಎಡಪಂಥೀಯರು

ಾಠವಾಡ ಘಟನೆ ಎಂದೂ ಮರೆಯಲಾಗ
ಹದ್ದು. ಆ ಚಳವಳಿಯಲ್ಲಿ ಎಲ್ಲಾ ಎಡಪಂ
ುರು ಮತ್ತು ದಲಿತ ಹಿತೈಷಿಗಳು ಸಮ್ಮೊಡ
ಿದ್ದರು. ರಿಪಬ್ಲಿಕನ್ ಪಕ್ಷಗಳೂ ಜತೆಗೂಡಿ
ರಾಡಿದವು. ಈ ಸಂದರ್ಭದಲ್ಲಿ ಪ್ಯಾಂಥರ್ಸ್
ಪುಗಳ ಭಿನ್ನಾಭಿಪ್ರಾಯಗಳು ಮಾಸಿಹೋಗಿ
ಎಂದು ಮರಾಠವಾಡದ ಕೆಲವು ಕಹಿ ಘಟ
ನ್ನು ಡಾಂಗಳೆ-ನೊಂದಮಾತುಗಳಲ್ಲಿ ನೆನೆ

ಥರ್ಸ್ ಸಂಘಟನೆಗೆ ದಲಿತ ಸಾಹಿತ್ಯ ಹೆಚ್ಚು
ಕೊಟ್ಟು ಒಂದು ನೆಲೆಗೆ ರೂಪಕೊಟ್ಟಿತು.

ಕಾಲು ಚಾಚುತ್ತಿದೆ ಪಾಳೆಯ

● ಮರಾಠಿ ಮೂಲ : ಅರ್ಜುನ ಡಾಂಗಳೆ
● ಅನುವಾದ: ಭಾಲಚಂದ್ರ ಜಯಶೆಟ್ಟಿ.

ಹಾಡುತ್ತಿರು ನೀನು ಕಿಕ್ಕಿರಿದ ಚೌಕದಲಿ
ಇಲ್ಲಿಯ ಸಪ್ತಸ್ವರಕ್ಕೆ ಸರಿಬಾರದ ನಿನ್ನ ಗೀತೆಗಳನ್ನು
ಬದಿಗಿಕ್ಕು
ನಿನಗೇಕೆ ಬೇಕವರ ತಾಳ ಮೇಳ ತಂಬೂರಿ

ಒಳಿತಾಯಿತು ನಿನ್ನ ಗೀತೆಯ ಸ್ವರ ನೀನು ಬದಲಾಯಿಸಿದಿ
ಆದರೆ ನೀನೇಕೆ ಇನಿತು ಹೌಹಾರಿದ್ದಿ
ಓಹ್, ಸ್ವರಮಾತ್ರ ಏಕೆ ಇಲ್ಲಿಯ ಸೂರ್ಯನನ್ನೂ ಬದಲಿಸಬೇಕು.
ಗೊತ್ತು ನನಗೆ
ಇಡಲಾಗುವುದಿಲ್ಲ ನಿನಗೆ
ನಿನ್ನ ಡಾಯರಿಯಲಿ ಹಾದು ಹೋಗುವ ದಾಖಲೆಗಳು
ಬರಿ ಬಿರುಗಾಳಿಗಳ ಲೆಕ್ಕವಷ್ಟೇ ಇಡಬೇಕಾಗುವುದು
ಆದರೂ ನೀನು ಹಾಡುತ್ತಿರು

ಹಾಡುತ್ತಿರು ನೀನು
ಹಸಿದ ಕಂಗಾಲರ ಜನ ಜಾತ್ರೆಯಾಗಿ
ಹಾಡುತ್ತಿರು ನೀನು
ಮುಕ್ತವಾಹಿನಿ ಇಲ್ಲವೆ ವಿಯಟ್ನಾಮಿಯಾಗಿ
ಹಾಡುತ್ತಿರು ನೀನು
ರುಚಿಯಾದ ನೀರ ಕೊಳದ ಸತ್ಯಾಗ್ರಹವಾಗಿ

ನೀನು ಹಾಡಲೇ ಬೇಕು
ಅವರು ತಮ್ಮ ಬಂಧಿತ ಸೂರ್ಯನೆಡೆಗೆ ನೆಗೆಯುವವರೆಗೆ
ನೀನು ಹಾಡು........ಹಾಡು........ಹಾಡು........ಬಿಳಿಬಿಟ್ಟು ಹಾಡು
ಕಾಲು ಚಾಚುತ್ತಿದೆ ಪಾಳೆಯ
ಕಬ್ಬಾಚ ಹತ್ತಿದೆ ಪಾಳೆಯ.

ವಿಮೋಚನೆಗಾಗಿ ಸಾಹಿತ್ಯ

[ಪಂಚಮ ಪ್ರತಿನಿಧಿಯಿಂದ]

ದಲಿತರ ನಿಜಬದುಕನ್ನು-ನೋವನ್ನು ಹೇಳುವ ದಲಿತ ಸಾಹಿತ್ಯಕ್ಕೆ ಸಾಹಿತ್ಯಪರಿಷತ್ತಿನ ವಾರ್ಷಿಕ ಸಮ್ಮೇಳನದಲ್ಲಿ ಪ್ರತ್ಯೇಕ ಗೋಷ್ಠಿ ಏರ್ಪಡಿಸಬೇಕೆಂಬ ಒತ್ತಾಯ-ಬೇಡಿಕೆಗಳಿಂದೆದ್ದ ವಾದ-ವಿವಾದ, ಗದ್ದಲ ಕರ್ನಾಟಕದ ಮಟ್ಟಿಗೆ ಸಾಹಿತ್ಯದಲ್ಲಿ ಒಂದು ಹೊಸ ತಿರುವನ್ನು ನೀಡಿತು. ಶೋಷಣಾಮಯ ಈ ಸಮಾಜದಲ್ಲಿ ನಿಕೃಷ್ಟ ಬದುಕಿಗೆ ಬಲಿಯಾಗಿರುವ ದಲಿತರ ನಿಜ ಬದುಕನ್ನು ಸ್ಪಂದಿಸುವ ಸಾಹಿತ್ಯ ಈವರೆಗೆ ನಿರೀಕ್ಷೆಗಿಂತ ಪರಿಣಾಮಕಾರಿಯಾಗಿ ಬರಲಿಲ್ಲ. ಆದರೆ ನಿರಾಶೆ ಅನಗತ್ಯ. ದಲಿತವರ್ಗದಿಂದಲೇ ಬಂದ ಲೇಖಕರು ತಮ್ಮ ಜನಾಂಗದ ದುಸ್ಥಿತಿ, ದುಃಖದುಮ್ಮಾನಗಳನ್ನು ಕಂಡುಂಡು ಬದುಕಿನ ನೋವ ಮಿಡಿತ ಸಿಡಿತಗಳಿಂದ ಇಂದಿನ ಕ್ರೂರ ವ್ಯವಸ್ಥೆ ಉಳಿಸಿ ಬೆಳೆಸುತ್ತಿರುವ ಶೋಷಣೆ, ದಬ್ಬಾಳಿಕೆ ವಿರುದ್ಧ ತಮ್ಮ ಆಕ್ರೋಶ, ಎಚ್ಚರಿಕೆಯನ್ನು ಸಾಹಿತ್ಯ ಪ್ರಕಾರದಲ್ಲಿ ಒಂದು ಹೊಸ ಅಲೆ ಎಬ್ಬಿಸಿದ್ದಾರೆ.

ಸಾಹಿತ್ಯ-ಸಾಹಿತ್ಯಕ್ಕಾಗಿ ಅಲ್ಲ. ವಿಮೋಚನೆಗಾಗಿ ಸಾಹಿತ್ಯ-(Litreture for liberation)-ಎಂಬುದನ್ನು ಅರಿತು ಬದುಕಿನ ನೈಜತೆಗಾಗಿ ಕಾವ್ಯವನ್ನೇ ಖಡ್ಗವನ್ನಾಗಿ, ರಕ್ತವನ್ನೇ ಇಂಕನ್ನಾಗಿ ಮಾಡಿಕೊಂಡಿರುವ ದಲಿತ ಬರಹಗಾರರು ಮತ್ತು ಪ್ರಗತಿಪರರು ಸೇರಿ ಕಳೆದ ಜನವರಿ 10 ಮತ್ತು 11 ರಂದು ಬೆಂಗಳೂರಿನಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಸಿದುದು ಒಂದು ಗುರುತರ ಹೆಜ್ಜೆ.

ಕರ್ನಾಟಕದ ಮೂಲೆಮೂಲೆಗಳಿಂದ ಮುಂದೇನು ಸಾಧಿಸಬೇಕು ಎಂಬ ಕುರಿತು ಅಸ್ಪಷ್ಟ ಚಿತ್ರವನ್ನಾದರೂ ಕಲ್ಪಿಸಿಕೊಂಡು ಬಂದ ಯುವಸಾಹಿತ್ಯಾಸಕ್ತರು, ಸಾಹಿತಿಗಳು, ಅಭಿಮಾನಿಗಳು ನೆರೆದರು. ತಾವು ಒಂದು ಹೊಸದನ್ನು ಬರಹ ಮೂಲಕವೊಂದೇ ಅಲ್ಲ, ಸಮ್ಮೇಳನ, ಸಂಘಟನೆ ಮೂಲಕ ಸಾಧಿಸುತ್ತಿದ್ದೇವೆ ಎಂಬ ಭರವಸೆ. ಕನ್ನಡದ ಅಕ್ಷರಗಳಲ್ಲಿ ಈ ಮಣ್ಣಿನ ಜನರ ರಕ್ತ-ಮಾಂಸ ತುಂಬಿ, ಅದಕ್ಕೊಂದು ಕ್ರಿಯಾತ್ಮಕತೆಯನ್ನು ಕೊಡುವ ಪ್ರಯತ್ನಕ್ಕೆ ಯುವಸಾಹಿತಿಗಳ ಒಟ್ಟು ನಿರ್ಣಯ. ಜತೆಗೆ ಕನ್ನಡದ್ದೊಂದೇ ಅಲ್ಲ, ಮರಾಠಿ, ತೆಲುಗು ಸಾಹಿತ್ಯ ಪ್ರತಿನಿಧಿಗಳ ಸಲಹೆ-ಮಾರ್ಗದರ್ಶನ-ಸಹ ಚಿಂತನಗಳ ಕೊಡುಕೊಳ್ಳುವಿಕೆ. ಅದಕ್ಕಾಗಿ, ಆ ಎರಡುದಿನ, ನಗರದ ನಾಡಿನ ಅಕ್ಷರಪ್ರೇಮಿಗಳ ಚಿಂತನೆಯು ಜತೆಗೆ ಸಾಮೂಹಿಕ ಕ್ರಿಯೆಗೆ ತೊಡಗಿಸುವುದಕ್ಕೆ 'ಬರಹ'ವನ್ನು ಪ್ರಚೋದಿಸುವ ಸಮ್ಮೇಳನ ಆಗಿ ಬಂಡಾಯ ಸಾಹಿತ್ಯ ಸಮ್ಮೇಳನ ತುಂಬ ಅರ್ಥಪೂರ್ಣ. ಕನ್ನಡದಲ್ಲೇ ಏಕೆ ಇಡೀ ಭಾರತದಲ್ಲೇ ಪ್ರಥಮವಾಗಿ, ಜನತೆಯ ಬಗ್ಗೆ ತೀವ್ರ ಕಾಳಜಿ ವಹಿಸಿದ ಎಡ ನಿಲುವಿನ ಸಾಹಿತಿಗಳ ಸಮ್ಮೇಳನ ನಡೆದದ್ದು ಈ ದಶಕದ ಅತೀ ಮಹತ್ವದ ಸಾಹಿತ್ಯಕ-ಸಾಮಾಜಿಕ ಘಟನೆ-ಸಂಘಟನೆ.

ಭಾರತದ ಇತಿಹಾಸ, ಉಲ್ಬಣಗೊಳ್ಳುತ್ತಿರುವ ಅಸಮಾನತೆ, ದಾರಿದ್ರ್ಯ ಪರಂಪರೆ ಹೊತ್ತ ಜನರ ಇತಿಹಾಸ. "ನಾವು ನಿರಂತರ ಗಾಯಗೊಂಡಿದ್ದೇವೆ. ನಮ್ಮ ತಪ್ಪುಗಳಿಗೆ ನಾವೇ ಆಹಾರವಾಗಿದ್ದೇವೆ. ಈ ನಾವು ಎಚ್ಚತ್ತುಕೊಂಡು ವ್ಯವಸ್ಥೆ ವಿರುದ್ಧ ಬಂಡೇಳುವುದು ಅನಿವಾರ್ಯ"—

ಬಂಡಾಯ ಸಮ್ಮೇಳನದ ದನಿ

ದೇವನೂರು ಮಹಾದೇವರು ಗುರುತಿಸುತ್ತ, "ನಮಗೆ ಪರಿವರ್ತನೆ ಬೇಕು. ಹೊಸ ಬೆಳಕು ಕಾಣಬೇಕು. ಅದಕ್ಕಾಗಿ ಬಂಡಾಯ ಪ್ರತಿಭಟನೆ" ಆಯ್ದುಕೊಂಡರು. ಕಿಕ್ಕಿರಿದ ಸಮ್ಮೇಳನ ಉದ್ಘಾಟಿಸಿದ ಆಂಧ್ರದ ಕ್ರಾಂತಿಕಾರಿ ಕವಿ ಶ್ರೀ ಶ್ರೀ- "ಲೇಖನಿಯಿಂದ ಬಂಡಾಯ ಅಸಾಧ್ಯ. ದೈಹಿಕವಾಗಿ ಬೀದಿಗಿಳಿದಾಗ ಮಾತ್ರವೇ ಪರಿವರ್ತನೆ ಸಾಧ್ಯ"ವೆಂಬುದನ್ನು ಒತ್ತಿಹೇಳಿ, ದಕ್ಷಿಣಭಾರತ ಕ್ರಾಂತಿಕಾರಕ ಲೇಖಕರ ಸಮ್ಮೇಳನಕ್ಕೆ ಇದು ಚಾಲನೆ ಆಗಲಿ ಎಂಬ ಆಶಯ ವ್ಯಕ್ತಮಾಡಿದರು. ಧರ್ಮಸ್ಥಳದ ಅಧಿಕೃತ ಸಮ್ಮೇಳನದ ವಿರುದ್ಧ ನಮ್ಮ ಬಂಡಾಯ ಎಂದ ಸಾಹಿತಿ ನಿರಂಜನರಿಂದ, ಧರ್ಮಸ್ಥಳ ಒಂದು 'ಯಜಮಾನ ಸಂಸ್ಕೃತಿ' ಸಂಕೇತ ಎಂದು ವರ್ಣನೆ. ದ್ವಿಮುಖ ಮೌಲ್ಯ ಪರಂಪರೆಗಳ ಮೂಲಕ ಜನತೆ ಎಂದೂ ಒಟ್ಟಾಗುವುದಕ್ಕೆ ಸಾಧ್ಯವಾಗದಂತೆ ನೋಡಿಕೊಳ್ಳುತ್ತಿರುವ ಈ ವ್ಯವಸ್ಥೆಯ ಆಳ-ನಿರಾಳ ಜಾಳಿಸಿ ನೋಡುವ ಜವಾಬುದಾರಿಯ ಬಂಡಾಯ ಸಾಹಿತ್ಯಕರು ಬರಹದ ಮೂಲಕ ಸಾಮಾಜಿಕ-ಸಾಂಸ್ಕೃತಿಕ ತುಳಿತದ ದಾರುಣತೆ ಒಡೆದು, ದಲಿತರ-ಶೋಷಿತರ ಕ್ರಿಯೆಗೆ ಚುರುಕುತಟ್ಟಿಸುವ ಹೊಣೆ ವಹಿಸುವ ಅನಿವಾರ್ಯತೆಯನ್ನು ಬಂಡಾಯ ಸಮ್ಮೇಳನ ಮನಗಂಡಿದೆ. ಆದರೆ "ಮೇಲ್ವರ್ಗ ಪ್ರತಿನಿಧಿಸುವ ನಾನು ಬಡವರ ಪರವಾಗಿ ಬಂಡಾಯ ಎದ್ದರೆ ಅದು ಸಮಗ್ರಕ್ರಾಂತಿ ಆಗದು. ಆದ್ದರಿಂದ ಕ್ರಾಂತಿ ಸಮಗ್ರ ಸ್ವರೂಪ ತಾಳಬೇಕಾದರೆ ಬಡವರ ನೆಲಗಟ್ಟಿನಿಂದ ವ್ಯಾಪಕವಾಗಿ ಹುಟ್ಟಬೇಕು". ನಾಯಕತ್ವ ಉಚ್ಚವರ್ಗಕ್ಕೇ ಹೋಗಿರುವುದನ್ನು ತಪ್ಪಿಸುವುದಕ್ಕೆ ಬಂಡಾಯ ಸಾಹಿತ್ಯಕ್ಕೆ ಬೆಂಬಲ ನೀಡಿದ ಖ್ಯಾತ ಬಂಡಾಯ-ಪತ್ರಕರ್ತ ಸಿ.ಜಿ.ಕೆ. ರೆಡ್ಡಿಯವರು ಸೂಕ್ಷ್ಮವಾಗಿ ಎಚ್ಚರಿಸಿದರು. ನಂತರ ಆಂಧ್ರದ ರಮಣಾರೆಡ್ಡಿ ಮತ್ತು ಮಹಾರಾಷ್ಟ್ರದ ದಲಿತ ಸಾಹಿತಿ ದಯಾ ಪವಾರ್ ಅವರು ಮಾತನಾಡಿದರು.

ಇದೇ ನಿಲುವನ್ನೇ ವಿಚಾರಗೋಷ್ಠಿ ಅಧ್ಯಕ್ಷಸ್ಥಾನದಿಂದ ಚಂದ್ರಶೇಖರ ಪಾಟೀಲ ವಿವರವಾಗಿ ಹೇಳುತ್ತ, ದಲಿತರಲ್ಲದ ಬಂಡಾಯ ಸಾಹಿತಿಗಳೇನಿದ್ದರೂ ಹಿಂದೆ ನಿಂತು ಬೆಂಬಲ ತೋರಿಸಬೇಕಷ್ಟೆ ಎಂದು ಪ್ರಾಮಾಣಿಕ ಆಶಯ ನೀಡಿ, ಬಂಡಾಯ ಸಾಹಿತ್ಯ ಮೂಲಕ ಅದರ ಉಪಯೋಗಪಡೆಯಲು ಯತ್ನಿಸುವ ಲೇಖಕರ ಎಚ್ಚರಿಕೆ ಬಗ್ಗೆಯೂ ಗಮನ ಸೆಳೆದರು. ಯುವಸಾಹಿತಿಗಳಾದ ದೇವಯ್ಯ ಹರವೆ, ಇಂದೂಧರ, ಬೆಸಗರಹಳ್ಳಿ ರಾಮಣ್ಣರಿಂದ ಬಂಡಾಯ ಸಾಹಿತ್ಯ, ವಿಮರ್ಶೆ, ದಲಿತರ ಬದುಕು ಕುರಿತು ಪ್ರಬಂಧ ಮಂಡನೆ.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಬಿ. ಕೃಷ್ಣಪ್ಪ ಅವರು 'ವಿಮರ್ಶೆ ಮತ್ತು ಸೈದ್ಧಾಂತಿಕ ಹೋರಾಟ' ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಎಸ್. ಶಿವಾನಂದ್, ಜಿ. ರಾಮಕೃಷ್ಣ, ವಿಜಯಪಾಟೀಲ ಮತ್ತು ಶಾಂತ ಅವರು ಪ್ರಬಂಧ ಮಂಡಿಸಿದರು.

ಪ್ರದರ್ಶಕ ಕಲೆಗಳು ಮತ್ತು ಸಮೂಹ ಶಿಕ್ಷಣ ದಲಿತರ ಶೋಷಿತರ ಪ್ರಜ್ಞೆ ಬೆಳೆಸುವಲ್ಲಿ ವಹಿಸುವ

[8ನೇ ಪುಟನೋಡಿ]

‘ಬಂಡೆಗಳ ಮೇಲೆ ನಾವು ಚಿಗುರೊಡೆಯಬೇಕಾಗಿದೆ’

ದಲಿತ ಬರಹಗಾರ ದೇವನೂರ ಮಹಾದೇವ ಅವರು ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಆಶಯ ಭಾಷಣ

ಸ್ನೇಹಿತರೆ, ನನ್ನೊಡನೆ ನಾನೇ ಮಾತನಾಡುತ್ತಿರುವೆ ಅಂದುಕೊಂಡು ನಿಮ್ಮೊಡನೆ ಈಗ ಮಾತಾಡುವ ಯತ್ನ ಮಾಡುತ್ತಿದ್ದೇನೆ. ಇಲ್ಲಿ ಒಟ್ಟಾಗಿರುವ ನಾವು ಅಲ್ಪಸ್ವಲ್ಪ ಬರಹಗಾರರು, ಸಾಹಿತ್ಯ ಸೃಷ್ಟಿಯಲ್ಲಿ ಆಸಕ್ತರು, ಇದರೊಡನೆಯೇ ಸಮಾಜದ ಬದಲಾವಣೆಗಾಗಿ ಆಸೆಪಡುವಂಥವರಾಗಿದ್ದೇವೆ. ಈ ಆಸೆ ನಮ್ಮನ್ನು ಇಲ್ಲಿ ಸೇರಿಸಿದೆ.

ಈ ಮೊದಲು ನಾವು ಪ್ರಗತಿಪಂಥ, ಬರಹಗಾರರ ಒಕ್ಕೂಟಗಳನ್ನು ಕೇಳಿದ್ದೇವೆ, ಕಂಡಿದ್ದೇವೆ. ಅವೂನು ತಮ್ಮೆಲ್ಲ ಮಿತಿ ಮತ್ತು ಕೊರತೆಗಳೊಡನೆ ಮನುಷ್ಯನ ಉನ್ನತಿ ಕಡೆಗೆ ಮುಖಮಾಡಿ ನಿಂತಂಥವುಗಳು. ಹಾಗಿದ್ದೂ ಅವು ಈಗ ಇಲ್ಲದಿರುವುದಕ್ಕೆ ಅವುಗಳೊಳಗಿನ ತಪ್ಪುಗಳೂ ಕಾರಣವಾಗಿವೆ. ಆ ಗಾಯಗಳು ಇನ್ನೂ ಒಣಗಿಲ್ಲ. ಈಗ ನಾವು ಅಂಥದೇ ಮತ್ತು ಅದರಿಂದ ಮುಂದುವರಿದ ಪ್ರಯತ್ನಕ್ಕೆ ಕೈ ಹಾಕಿದ್ದೇವೆ. ಇದುವರೆಗೂ ಆದ ಪ್ರಯತ್ನಗಳನ್ನು ಮತ್ತು ಕ್ರೂರ ಇತಿಹಾಸ ಉಳಿಸಿರುವ ಗಾಯಗಳನ್ನು ಕಂಡುಕೊಂಡು ನಡೆಯಬೇಕಾಗಿದೆ. ಇಲ್ಲದಿದ್ದಲ್ಲಿ ಹುಟ್ಟಿನ ಸೆರುಗಿಗೆ ಸಾವನ್ನು ನಾವೇ ಗಂಟು ಹಾಕಿದಂತಾಗುತ್ತದೆ.

ಯಾಕೆಂದರೆ ಬಂಡೆಗಳ ಮೇಲೆ ನಾವು ಚಿಗುರೊಡೆಯಬೇಕಾಗಿದೆ. ಈ ಭಯವು ಎಚ್ಚರವು ನಮ್ಮನ್ನು ಉಳಿಸಬಲ್ಲದು. ಯಾಕೆಂದರೆ ಒಕ್ಕೂಟವನ್ನು ಅದರ ಹುಂಬುತನ, ಅಬ್ಬರ, ಪ್ರಚಾರ, ತತ್ವವನ್ನು ವ್ಯಕ್ತಿಗತಗೊಳಿಸುವ ಗೊಂದಲದ ಸರಪಳಿಗಳು ಒಕ್ಕೂಟವನ್ನು ಕಟ್ಟಿಹಾಕಿ ನಮ್ಮ ಕಣ್ಣೆದುರು ತಿಂದುದ್ದನ್ನು ನೋಡಿದ್ದೇವೆ. ನಮ್ಮ ತಪ್ಪುಗಳಿಗೆ ನಾವೇ ಆಹಾರವಾಗಬಹುದು ಎಂಬ ಎಚ್ಚರದೊಡನೆ ನಾವು ಕಾಲಿಡಬೇಕಾಗಿದೆ.

ಈಗ ನಡೆಯುತ್ತಿರುವ **ಬಂಡಾಯ ಸಾಹಿತ್ಯ ಸಮ್ಮೇಳನವು ತನ್ನ ಹುಟ್ಟಿನೊಡನೆ ಗದ್ದಲವನ್ನು ಹುಟ್ಟಿಸಿಕೊಂಡಿದೆ. ಸ್ವಲ್ಪ ಆತುರವಾಗೂ ಅಂದರೆ ಏಳು ತಿಂಗಳಿಗೆ ಹುಟ್ಟಿದೆ. ಈಗ ನಮಗೆ ಉಳಿದಿರುವ ಒಂದು ಆಸೆಯೂದ ದಲಿತ ಸಂಘರ್ಷ ಸಮಿತಿಯ ಬೆಳವಣಿಗೆಯಲ್ಲಿ ಪ್ರಗತಿಪರರ ಒಡಗೂಡಿ ಅದು ತನ್ನ ಸಹಜ ಹುಟ್ಟನ್ನು ಕಂಡುಕೊಳ್ಳಬೇಕಿತ್ತು. ಏನೇ ಆಗಿದ್ದರೂ ಅದರ ಹುಟ್ಟು** ತಪ್ಪಲ್ಲ. ಅದರಲ್ಲಿ ತಪ್ಪುಗಳಿದ್ದರೆ ಅದರಿಂದಾಗಿ ಇಲ್ಲಿರುವ ನಮ್ಮಗಳ ಹೊಣೆ ಹೆಚ್ಚಿದಂತಾಗಿದೆ, ಅಷ್ಟೆ.

ನಮಗೆ ಬೇಕಾಗಿರುವುದು, ಸಾಹಿತ್ಯ ಪರಿಷತ್ತಿನಂಥ ನಮ್ಮದಾದ ಒಂದನ್ನು ಕಟ್ಟುವುದಲ್ಲ ಎಂಬುದನ್ನು ನಾವು ಇಡುವ ಮೊದಲ ಹೆಜ್ಜೆಯಲ್ಲೇ ತೋರಿಸಿಕೊಡಬೇಕಾಗಿದೆ. ಸಾಹಿತ್ಯ ಪರಿಷತ್ತು, ಅದಕ್ಕಿರುವ ರೂಪದಲ್ಲಿ ಎಂದೂ ನಮ್ಮಂಥವರ ಆಸೆಗಳನ್ನು ಮುಚ್ಚಲಾರದು. ನಮ್ಮ ಆಸೆಗಳ ಪೂರೈಕೆಗಾಗಿ ಅದರ ಕಡೆ ನೋಡುವುದೇ ನಮ್ಮ ತಪ್ಪು, ಮೂರ್ಖತನ ಇತ್ಯಾದಿ. ಪರಿಷತ್ತು ನಿಲುಗಡೆಯಾದ ಸಾಹಿತ್ಯವನ್ನು ಮೆರೆಸುತ್ತ ಬಂದಿದೆ. ಅದರಿಂದ ಆಗುವುದೂ ಅದೇನೆ. ಅದಕ್ಕಾಗಿ ನಮಗೆ ಆಕ್ರೋಶವೂ ಅನಗತ್ಯ. ನಾನೇ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದರೂ ಸಿದ್ದಲಿಂಗಯ್ಯನವರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಬಹುದು ಅಥವಾ ಸಿದ್ದಲಿಂಗಯ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರೆ ನಾನು ಸಮ್ಮೇಳನದ ಅಧ್ಯಕ್ಷನಾಗಬಹುದು. ಇದಲ್ಲ ನಮಗೆ ಬೇಕಾಗಿರುವುದು. ಖಂಡಿತವಾಗೂ ಇದಲ್ಲ. ನಮಗೆ ಬೇಕಾಗಿರುವುದು ನಡಿಗೆ. ಅದಕ್ಕಾಗಿ ಇಲ್ಲಿ ನಾವು ಕೂತಿದ್ದೇವೆ. ನಮ್ಮನ್ನು ಇಂದು ಕಂಡುಕೊಳ್ಳೋಣ. ಸಮತಾವಾದದ ಮಾತುಗಳಲ್ಲಿ ಹೇಳುವುದು ಅದೆಷ್ಟೇ ಆಕರ್ಷಕವಾಗಿದ್ದರೂ ಅವೂ ಇಂಡಿಯಾದಲ್ಲಿ ತುಕ್ಕು ಹಿಡಿದು ಕುಂತಿವೆ. ಅವನ್ನೂ ನಾವು ಚಿಗುರಿಸಬೇಕಾಗಿದೆ. ನಮ್ಮ ಮಾತುಗಳು ತಮ್ಮ ಮಾತನ್ನು ನಿಲ್ಲಿಸಿ ನಮ್ಮ ಕ್ರಿಯಾ ಮಾತಾಡುವುದಾದಲ್ಲಿ ಸಮಾಜವಾದ ಸಮತಾವಾದಗಳು ಆಗ ಚಿಗುರೊಡೆಯಬಹುದು. ಅದಕ್ಕಾಗಿ ನಾವು ಏನು ಮಾಡಬಹುದು ಅಥವಾ ನಮ್ಮ ಕೈಲಿ ಆಗುವುದು ಎಷ್ಟು? ಇದು ಈಗ ನಮ್ಮ ಮುಂದಿದೆ.

ನಮ್ಮ ಈ ಪಾಪಿಷ್ಠರಾಷ್ಟ್ರದಲ್ಲಿ ಎಲ್ಲ ತುಳಿತಗಳೊಡನೆ ಜ್ಞಾನ ಬಂಡವಾಳಶಾಹಿಯೂ ಸೇರಿ ಮಾನವ ಸಮೂಹವನ್ನು ಕತ್ತಲ ರಾಜ್ಯಕ್ಕೆ ಸತತವಾಗಿ ನೂಕುತ್ತ ಬಂದಿದೆ. ಮಾನವ ಸಮೂಹವು ಇಲ್ಲಿ ತನ್ನ ಅರಿವು ಕಳೆದುಕೊಂಡು ಕುಂತಿದೆ. ಕೇವಲ ಇರುವ ಅನುಭವ ಕಲಾಸಂಪತ್ತು ಕಲಾವಿದರನ್ನು ಹುಟ್ಟಿಸಲಾಗದಿದ್ದರೂ ಗಣಿಯೊಳಗೆ ಅರಿವಿಲ್ಲದಿರುವ ಅಸಂಖ್ಯ ಕಲಾವಿದರನ್ನು ಕಾಣುವ ಕೆಲಸ ಮಾಡಬಹುದು. ಅವರನ್ನು ಅವರಿಗೆ ಕಾಣಿಸುವ ಕೆಲಸ ಮಾಡಬಹುದು. ಆಗ ನೋವು ಗಾಯಗಳು ತಮ್ಮ ಮಾತನ್ನಾಡಲು ಆರಂಭಿಸುತ್ತವೆ. ಆಗ ನಮಗೆ ಬೆಳಕು ಕಾಣಬಹುದು. ಆ ಬೆಳಕು ತನ್ನ ಹುಟ್ಟಿನಲ್ಲೆ ಸಮಾಜಕ್ಕೆ ನಡಿಗೆ ತಂದು ಕೊಟ್ಟಿರುತ್ತದೆ.

ನಾನು ಅಂಥ ಕತ್ತಲ ರಾಜ್ಯದಿಂದ ಬಂದಂಥವನು. ಕಲಾ ಮಾಧ್ಯಮದಲ್ಲಿ ನಾನು ಕಂಡುಕೊಳ್ಳುತ್ತಿರುವುದು ಒಂದು ಆಕಸ್ಮಿಕವೆ. ನಾನು ಇದುವರೆಗೆ ಬರೆದಿರುವುದು ನಮ್ಮ ರಾಜ್ಯದ ಮನುಷ್ಯನ ಆರೇಳು ಬೆರಳುಗಳು. ಹೆಚ್ಚೆಂದರೆ ಒಂದು ಹಸ್ತ ಇದ್ದೀತು. ಅದಷ್ಟೆ ಕನ್ನಡ ಸಾಹಿತ್ಯದ ಗತಿಯನ್ನು ಅಲ್ಲಾಡಿಸುವಲ್ಲಿ ತನ್ನ ಪ್ರಮಾಣಕ್ಕಿಂತ ಹೆಚ್ಚಾಗಿ ಅಲ್ಲಾಡಿಸಿದೆ. ಒಂದೆರಡು ಬೆರಳು ಹಸ್ತಕ್ಕೆ ಇಷ್ಟಾಗುವುದಾದರೆ, ಕತ್ತಲ ರಾಜ್ಯದ ಇಡೀ ಮನುಷ್ಯ ಮಾತಾಡುವುದಾದರೆ ಅದರಿಂದ ಉಂಟಾಗುವ ಬದಲಾವಣೆಯು ನನ್ನ ಕಲ್ಪನೆಗೆ ಎಟುಕದಷ್ಟಾಗಬಹುದು. ಆ ಬದಲಾವಣೆಗಾಗಿ ಈ ಮನುಷ್ಯನ ನುಡಿಗೆ ನುಡಿಕೊಡಲು ನೂರಾರು ಜನರು ಹುಟ್ಟಬೇಕಾದೀತು. ಒಂದು ಆಂದೋಲನ ಇದನ್ನು ಕಾಣಿಸಬಹುದೇನೊ.

ಇಂಥ ಒಂದು ಆಂದೋಲನದಿಂದ ಮಾತ್ರವೇ ಅಸ್ಪೃಶ್ಯತೆಯ ಕತ್ತಲು ಕೊನೆಯಾಗಬಹುದು. ಜಾತೀಯ ಗೋಡೆಗಳು ಕುಸಿಯಬಹುದು, ವರ್ಗದ ಪಿರಮಿಡ್ಡು ನೆಲಸಮವಾಗಬಹುದು. ಮನುಷ್ಯ ಮನುಷ್ಯರ ನಡುವೆ ಮನುಷ್ಯ-ಮನುಷ್ಯ ಸಂಬಂಧ ಉಂಟಾಗಬಹುದು. ಮನುಷ್ಯ ಮನುಷ್ಯರ ನಡುವೆ ಇರುವ ದ್ವೇಷ ವಿಷಕ್ಕೆ ಬದಲಾಗಿ ಪ್ರೀತಿಹಾಲು ಉಕ್ಕಬಹುದು. ಈ ರೂಪಾಂತರವನ್ನು ಹಿಡಿಯುವ ಕಲೆಯು ತಾನೂ ಹೊಸ ಹುಟ್ಟನ್ನು ಪಡೆದು ಹೊಸ ಮನುಷ್ಯನ ಹುಟ್ಟಿಗೂ ಕಾರಣವಾಗಿರುತ್ತದೆ. ಇದನ್ನು ಕಾಣುವುದು ನಮ್ಮ ಮೇಲೂ ಚರಿತ್ರೆಯ ಮೇಲೂ ನಿಂತಿದೆ.

ದಲಿತ ಬರಹಗಾರರ ಮೇಲಿನ ದೌರ್ಜನ್ಯಕ್ಕೆ ತೀವ್ರ ಖಂಡನೆ

ಸರ್ಕಾರವು ಬಡರೈತರನ್ನು ಒಕ್ಕಲೆಬ್ಬಿಸಿ ಬೀದಿ ಪಾಲು ಮಾಡುತ್ತಿರುವ ಘಟನೆಯನ್ನು ತಿಳಿಯಲು ಹೋಗಿದ್ದ ದಲಿತ ಬರಹಗಾರರಾದ ದೇವನೂರ ಮಹಾದೇವ ಮತ್ತು ಗೋವಿಂದಯ್ಯ ಅವರ ಮೇಲೆ ಅರಣ್ಯ ಅಧಿಕಾರಿಗಳು ನಡೆಸಿದ ಅಮಾನವೀಯ ದೌರ್ಜನ್ಯವನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ, ವೀರಾಜಪೇಟೆ ರೈತಸಂಘ, ಬಂಡಾಯ ಸಾಹಿತ್ಯಸಂಘಟನೆಯ ರಾಜ್ಯ ಸಮಿತಿ ಮತ್ತು ಅದರ ಮೈಸೂರು ಘಟಕ ಮುಂತಾದ ದಲಿತ ಸಂಘ ಸಂಸ್ಥೆಗಳು ತೀವ್ರವಾಗಿ ಖಂಡಿಸಿವೆ. ಈ ಘಟನೆ ಬಗ್ಗೆ ತನಿಖೆ ನಡೆಸಬೇಕೆಂದು ಅವು ಸರ್ಕಾರವನ್ನು ಒತ್ತಾಯಪಡಿಸಿವೆ.

ತಿತಿಮತಿ ದೌರ್ಜನ್ಯ.......

(ಒಂದನೇ ಪುಟದಿಂದ)

ಗಳು ಕಿಚ್ಚಿಡುತ್ತಿದ್ದಾರೆ. ಅರಣ್ಯದ ಕಾಡು ಮೃಗಗಳಿಂದ ಆಗದಿದ್ದ ಕಷ್ಟ-ನಷ್ಟಗಳು ಈಗ ಮನುಷ್ಯ ವಿರೋಧಿ ಕ್ರೂರ ಸರ್ಕಾರದಿಂದ ಆಗುತ್ತಿದೆ. ಸರ್ಕಾರದ ಹಂಗಿಲ್ಲದೆ ಸ್ವಯಂ ನಿರ್ಮಿತ ಸೌಲಭ್ಯಗಳಿಂದ ಈಗ ಆ ಬಡರೈತ ಕುಟುಂಬಗಳು ವಂಚಿತರಾಗಿ ಅತಂತ್ರರಾಗಬೇಕಾದ ಸ್ಥಿತಿ ಒದಗಿದೆ. ಅರಣ್ಯದಲ್ಲೇ ಇವರುಗಳನ್ನು ಬಿಟ್ಟರೆ ಗಂಧದ ಮರದ ಕಳ್ಳಸಾಗಾಣಿಕೆ ಮುಂತಾದ ಕಳ್ಳತನದಲ್ಲಿ ತೊಡಗುತ್ತಾರೆ ಮತ್ತು ಪ್ರಾಣಿಗಳ ಸಾಕಾಣಿಕೆಗೆ ಇವರಿಂದ ಅಡ್ಡಿ ಉಂಟಾಗುತ್ತಿದೆ ಎಂಬುದು ಸರ್ಕಾರದ ಆರೋಪ. ಗಂಧದ ಮರಗಳನ್ನು ಕಳ್ಳಸಾಗಾಣಿಕೆ ಮಾಡಿ ಜೇಬುತುಂಬಿಸಿಕೊಂಡಿದ್ದರೆ ಪ್ರಾಣಿಗಳ ಜತೆ ಆ ಬಡರೈತರು ಕಾಡಿನಲ್ಲೇ ಇರಬೇಕಾದ ಸ್ಥಿತಿಯಾದರೂ ಯಾಕಿತ್ತೆಂಬುದು ಸರ್ಕಾರಕ್ಕೆ ಹೊಳೆಯದೆ ಇಲ್ಲದಿರುವುದು ಎಂಥ ವಿಪರ್ಯಾಸ!

ಸರ್ಕಾರದ ಈ ಅಟ್ಟಹಾಸದ ದೌರ್ಜನ್ಯದಿಂದ ತತ್ತರಿಸಿ ಹೋಗುತ್ತಿರುವ ಜನರ ಸ್ಥಿತಿಯನ್ನು ತಿಳಿಯಲು ಹೋದ ದಲಿತ ಬರಹಗಾರರಾದ ದೇವನೂರು ಮಹಾದೇವ ಮತ್ತು ಗೋವಿಂದಯ್ಯ ಅವರನ್ನು ಅರಣ್ಯಾಧಿಕಾರಿಗಳು ಕ್ರೂರವಾಗಿ ಥಳಿಸಿದ್ದಾರೆ.

ಮಾರ್ಚ್ 11ರಿಂದ ಆರಂಭಿಸಲಾದ ಈ ಅಮಾನವೀಯ ಕೃತ್ಯ ಇನ್ನು ಎಡಬಿಡದೆ ಮುಂದುವರಿದಿದ್ದು ಬಡರೈತರ ಗೋಳು ಅರಣ್ಯರೋಧನವಾಗಿದೆ. ಈ ಸಂಬಂಧದಲ್ಲಿ ಬಡರೈತರಿಗೆ ಆದ ಅನ್ಯಾಯ ಖಂಡಿಸಿ ವೀರಾಜಪೇಟೆ ತಾಲ್ಲೂಕು ರೈತಸಂಘದ ನೇತೃತ್ವದಲ್ಲಿ ತಾಲ್ಲೂಕು ಕಛೇರಿ ಮುಂದೆ ಮಾರ್ಚ್ 23ರಿಂದ ಧರಣಿ ಸತ್ಯಾಗ್ರಹ ನಡೆಯುತ್ತಿದೆ.

ಗುಡಿಸಲುಗಳ ನಾಶವು...

(ಒಂದನೇ ಪುಟದಿಂದ)

ಹಣ ನೀಡಿದ್ದ ಯಶೋದಮ್ಮ ಎಂಬುವವರ ಬಳಿಗೆ ಆಕೆ ಬಂದು ಪತ್ರಕ್ಕೆ ಸಹಿಹಾಕಲು ಕೇಳಿಕೊಂಡಳು. ಆದರೆ ಯಶೋದಮ್ಮ ತಾನು ಹಣ ಕೊಟ್ಟಿರುವುದು ನಿಜವೆಂದು, ಪತ್ರಕ್ಕೆ ಸಹಿ ಮಾಡುವುದಿಲ್ಲವೆಂದು ನಿರಾಕರಿಸಿದಳು. ಸ್ವಾಮಿನಿಷ್ಠೆಗಾಗಿ ಪುಟ್ಟಮ್ಮ ಯಶೋದಮ್ಮಳ ಮೇಲೆ ಜಗಳಕ್ಕೆ ತೊಡಗಿ ಆಕೆಯ ಮುಂದಲೆಯನ್ನು ಹಿಡಿದು ಎಳೆದಾಟದಲ್ಲಿ ತೊಡಗಿದ್ದಳೆಂದು, ಯಶೋದಮ್ಮ ಳಕಂಕುಳಲ್ಲಿದ್ದ ಸುಮಾರು ಎರಡು-ಮೂರು ವರ್ಷದ ಹಸುಳೆ ಕೆಳಗೆ ಬಿದ್ದು ತೀವ್ರ ಗಾಯಗೊಂಡು ಮರುದಿನ ಅಸುನೀಗಿತೆಂದು ಹೇಳಲಾಗಿದೆ.

ಹತ್ತು ಎಕರೆ ಈ ಪ್ರದೇಶದಲ್ಲಿ ನೆಲಸಿದ್ದ ಅನೇಕ ಕುಟುಂಬಗಳು ಮನೆಗಂಡಾಯವನ್ನು ನೀಡಿರುವ ಪ್ರಸಂಗಗಳಿವೆ. ಇಷ್ಟಾದರೂ ನಿರ್ವಸತಿಗರಾಗಿರುವ ಆ ಜನರಿಗೆ ಈಗ ಪ್ರತಿ ಸೌಲಭ್ಯದ ಯಾವ ಬದುಕಿನ ಭರವಸೆಗಳೂ ಇಲ್ಲದಾಗಿದೆ. —

ಢಾಂಗಳೆ ಉದ್ಘೋಷ

(ಮಧ್ಯದ ಪುಟದಿಂದ)

ನಮ್ಮಲ್ಲಿ ವಿಪುಲವಾಗಿ ಸಾಹಿತ್ಯ ಬೆಳೆದಿದೆ. ಒರಿಯ ಬರಹಗಾರ ಬಾಬುರಾವ್ ಬಾಗುಲ್ ಅಧ್ಯಕ್ಷತೆಯಲ್ಲಿ ನಮ್ಮದೆ ಆದ ಸಂಘಟನೆ ಇದೆ-ಇದರಲ್ಲಿ ಬಹುತೇಕ ಪ್ಯಾಂಥರ್ಸ್ ಸಂಘಟನೆಯ ಸಕ್ರಿಯ ಕಾರ್ಯಕರ್ತರು ಎಂದ ಢಾಂಗಳೆ ದಲಿತ ಸಂಘರ್ಷಸಮಿತಿಯಲ್ಲಿ ಎಷ್ಟು ಮಂದಿ ಬರಹಗಾರರಿದ್ದಾರೆಂದು ತಿಳಿಯಲಪೇಕ್ಷಿಸಿದರು. ದೇವನೂರು ಮಹದೇವ, ಸಿದ್ದಲಿಂಗಯ್ಯ ಮುಂತಾದವರನ್ನು ಪರಿಚಯಿಸಿದ ಕೃಷ್ಣಪ್ಪ ಅವರು 'ದ್ಯಾವನೂರು'. 'ಹೊಲೆಮಾದಿಗರ ಹಾಡು' ಗಳನ್ನು 'ಒಡಲಾಳ' ಕಥೆಯ-ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಿದರು.

ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಅಧಿಕಸಂಖ್ಯೆಯಲ್ಲಿ ಭಾಗವಹಿಸಿದ್ದ ದಲಿತ ಯುವಬರಹಗಾರರು ಮತ್ತು ಸಂಘರ್ಷ ಸಮಿತಿ ಕಾರ್ಯಕರ್ತರು ಹಾಡಿದ ಹಾಡು ಮುಂತಾದ ಚಟುವಟಿಕೆಗಳನ್ನು ಪವಾರ್ ಮತ್ತು ಢಾಂಗಳೆ ಪ್ರಶಂಸಿಸಿದರು.

ಬಂಡಾಯದ ದನಿ

[6ನೇ ಪುಟದಿಂದ]

ಪಾತ್ರ ಅಸಮಾನ್ಯ. ಜನಜೀವನ ಚಿತ್ರಿಸುವ "ಕ್ಯಾಮರಾ" ಬೇಕು ಎಂಬ ಬೇಡಿಕೆ ಮಂಡಿಸಿದ ಮರಾಠಿ ದಲಿತ ಸಾಹಿತಿ ಅರ್ಜುನ ಡಾಂಗಳೆ, ಜಾತೀಯತೆಯ ದಬ್ಬಾಳಿಕೆಗಳನ್ನು ಗಂಭೀರವಾಗಿ ಚಿತ್ರಿಸಿ ಜನತೆಯನ್ನು ತಲುಪುವಂತೆ ಮಾಡಬೇಕೆಂದರು.

ಪ್ರಸನ್ನ, ರಾಮದೇವರಾಕಿ, ಹೊರೆಯಾಲ ದೊರೆಸ್ವಾಮಿ ಈ ಕುರಿತು ವಿವರ ಚರ್ಚೆ ಮಾಡಿದರು.

ಕವಿಗಳು ಜನತೆಯ ಭಾವನೆ ಮಟ್ಟದ ಜತೆ ಓಡುತ್ತ, ಅದರ ದಿಕ್ಕನ್ನು ಬದಲಿಸಬಲ್ಲಂಥವರು. ಸಿದ್ದಲಿಂಗಯ್ಯ "ಇಕ್ರಲಾ ಒದಿರ್ಲಾ" ಎಂದಾಗ ಕೇಳುಗನಿಗೂ ದಾರುಣ ವಾಸ್ತವ ಕೇಳಿ, ಕುಡು ಕ್ರಿಯೆಗೆ ತೊಡಗುವಂತೆ ಆಗುತ್ತದೆ. ಇಲ್ಲಿ ಡಾಂಗಳೆ ಸೂಕ್ತವಾಗಿಯೇ ಗುರುತಿಸಿದಂತೆ ಬೈಗುಳ ಮಾತ್ರ ದಲಿತ ಕರೆ ಆಗಲಾರದು. ಈ ದಿಸೆಯಲ್ಲಿ ಅರ್ಥಪೂರ್ಣ ತಿಳುವಳಿಕೆ ಉಂಟುಮಾಡಿ ಸಹಸ್ಪಂದಿಸುವಂತೆ ಓದಿದ ಕವಿಗಳು ಹಲವಾರು.

ಬಂಡಾಯದ ಸ್ಫೂರ್ತಿ

ಮುಕ್ತಾಯ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಮಹಾರಾಷ್ಟ್ರದ 72 ವರ್ಷದ ಗೋದಾವರಿ ಪರುಳೇಕರ್ ಇನ್ನೂ ಬಂಡಾಯದ ಸ್ಫೂರ್ತಿ. ಜತೆಗೆ ತನ್ನ ಸಹಬಾಂಧವರ ಬಗ್ಗೆ ಕಾಳಜಿ. ಅವರಿಗೆ-ಹೆಂಗಸರಿಗೆ-ಸಮಾನಾವಕಾಶ ದೊರೆಯದ ಹೊರತು ಸಮಾಜವಾದ ಸಾಧ್ಯವಿಲ್ಲ ಎಂಬುದು ಅವರ ಸ್ಪಷ್ಟನುಡಿ,

ಎರಡು ದಿನ ಇಡೀ ಕ್ರಿಯೆಯಲ್ಲಿ ತಾದಾತ್ಮ್ಯ ಹೊಂದಿದ್ದ ಬದಲಾವಣಾಕಾಂಕ್ಷಿ ಗಳೆಯರು 'ಬಿಟ್ಟಾಗುವ' ನಿರ್ಣಯ ಕೈಗೊಂಡು ಜನತೆಯ ಪರ ಬರೆಯುವ ಹೊಸ ಸಮಾಜಕ್ಕೆ ಹಾತೊರೆಯುವ ಆಶಯದಿಂದ ಮತ್ತೆ ಮರುಸಮ್ಮಿಳನ ಸಂಘಟನೆಗೆ ಇಚ್ಛಿಸಿದರು. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಆಳ-ಪಟ್ಟಭದ್ರ ಹಿತಕ್ಕೆ ಸಿಂಹಸ್ವಪ್ನ ಆದ ಬಂಡಾಯ ಸಾಹಿತ್ಯ ಸಮ್ಮೇಳನ ಮಹತ್ವದ ಸಾಹಿತ್ಯಕ ಸಾಂಸ್ಕೃತಿಕ ದಾಖಲೆ.

ಈ ಪತ್ರಿಕೆಯು ರಾಮದೇವ ರಾಕಿ ಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-. ಇಲ್ಲಿ ಮುದ್ರಿಸಲ್ಪಟ್ಟು ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು.
ವಿಳಾಸ: 5-ಎ, ವಾಣಿ ವಾಣಿಜ್ಯ ಶಾಲೆ, ಪತ್ರಕರ್ತರ ಕಾಲೋನಿ, ಬೆಂಗಳೂರು-560 002